# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 59 (14)
ಸದಸ್ಯರ ಹೆಸರು : ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನ ಸಭಾ ಕ್ಷೇತ್ರ)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು
ಉತ್ತರಿಸುವ ದಿನಾಂಕ : 15.02.2022

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೋವಿಡ್–19 ನಿಂದ ಕೈಗಾರಿಕಾ ಕ್ಷೇತ್ರಕ್ಕೆ ನಷ್ಟ ಉಂಟಾಗಿದೆಯೇ; ಹೌದಾದಲ್ಲಿ ನಷ್ಟದ ಪ್ರಮಾಣವೆಷ್ಟು ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು) | ಕೋವಿಡ್–19 ನಿಂದ ಕೈಗಾರಿಕಾ ಕ್ಷೇತ್ರಕ್ಕೆ ನಷ್ಟ ಉಂಟಾಗಿದೆ. ಇದರ ಪ್ರಮಾಣವನ್ನು ನಿಖರವಾಗಿ ಅಂದಾಜು ಮಾಡಲು ಸಾಧ್ಯವಾಗಿರುವುದಿಲ್ಲ.<br><br>ಆದಾಗ್ಯೂ, ಕರ್ನಾಟಕ ಸರ್ಕಾರದಿಂದ ಕೊರೋನಾದಿಂದ ತೊಂದರೆಯಾಗಿರುವ ಅನೇಕ ಸಣ್ಣ ಉದ್ಯಮಗಳಿಗೆ ಈ ಕೆಳಗಿನ ಪ್ರೋತ್ಸಾಹಗಳನ್ನು ಜಾರಿಗೊಳಿಸಲಾಗಿದೆ.<br><br>➢ ಕೇಂದ್ರ ಸರ್ಕಾರ ಘೋಷಿಸಿರುವ "ಆತ್ಮ ನಿರ್ಭರ ಭಾರತ ಅಭಿಯಾನ" ದ ಅಡಿಯಲ್ಲಿ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು "ಇ.ಸಿ.ಎಲ್.ಜಿ"– ಎಮರ್ಜೆನ್ಸಿ ಕ್ರೆಡಿಟ್ ಲೈನ್ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದು, ಇದರನ್ವಯ ಫೆಬ್ರವರಿ 2020 ರ ಅಂತ್ಯಕ್ಕೆ ಬ್ಯಾಂಕ್‌ಗಳಲ್ಲಿ ಬಾಕಿ ಇರುವ ಎಂ.ಎಸ್.ಎಂ.ಇ ಘಟಕಗಳ ಸಾಲದ ಮೊತ್ತಕ್ಕೆ ಶೇ. 20 ರಷ್ಟು ಹೆಚ್ಚುವರಿ ಸಾಲವನ್ನು ಯಾವುದೇ ಹೆಚ್ಚುವರಿ ಖಾತರಿ ಇಲ್ಲದೇ ನೀಡಲಾಗುತ್ತಿದೆ.<br><br>➢ ರಾಜ್ಯ ಸರ್ಕಾರದ ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಎಪ್ರಿಲ್ ಮತ್ತು ಮೇ 2020 ತಿಂಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.<br><br>➢ ಇಂಧನ ಇಲಾಖೆಯು ವಿದ್ಯುತ್ ಬಿಲ್‌ನ್ನು ಪ್ರಾಮಾಣಿಕವಾಗಿ ನಿಗದಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ.<br><br>➢ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು ಮಾರ್ಚ್, ಎಪ್ರಿಲ್ ಮತ್ತು ಮೇ 2020 ತಿಂಗಳಲ್ಲಿ ಪಾವತಿಸದಿದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಲಾಗಿದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸುವುದಿಲ್ಲ. |

| | | |
|---|---|---|
| | | ➢ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ ಎಪ್ರಿಲ್ ಮತ್ತು ಮೇ 2020 ತಿಂಗಳುಗಳ ಕಂತನ್ನು ಮುಂದೂಡಲಾಗಿದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.<br>➢ ಕೊರೋನಾ 2ನೇ ಅಲೆಯ ನಂತರ ರಾಜ್ಯ ಸರ್ಕಾರದ ಇಂಧನ ಇಲಾಖೆಯು ದಿನಾಂಕ 21.06.2021 ರ ಆದೇಶದಂತೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಪಾವತಿಸಬೇಕಾದ ಮೇ ಮತ್ತು ಜೂನ್ 2021 ತಿಂಗಳ ಬೇಡಿಕೆ/ ನಿಗದಿತ ಶುಲ್ಕವನ್ನು ಮನ್ನಾ ಮಾಡಿರುತ್ತದೆ. |
| ಆ | ಕಳೆದ 2 ವರ್ಷದಿಂದ ಕೈಗಾರಿಕಾ ಕ್ಷೇತ್ರದಲ್ಲಿ ಉದ್ಯೋಗ ಕಡಿತಗೊಂಡು ಆರ್ಥಿಕವಾಗಿ ಹಿಂದುಳಿದ ನಿರುದ್ಯೋಗಿಗಳಿಗೆ ಸರ್ಕಾರದಿಂದ ಉತ್ತೇಜನ/ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕ್ರಮಗಳೇನಾದರೂ ಕೈಗೊಳ್ಳಲಾಗಿದೆಯೇ;<br>(ಹೌದಾದಲ್ಲಿ, ಸಂಪೂರ್ಣ ವಿವರ ನೀಡುವುದು) | ಕಳೆದ 2 ವರ್ಷದಿಂದ ಕೈಗಾರಿಕಾ ಕ್ಷೇತ್ರದಲ್ಲಿ ಉದ್ಯೋಗ ಕಡಿತಗೊಂಡು ಆರ್ಥಿಕವಾಗಿ ಹಿಂದುಳಿದ ನಿರುದ್ಯೋಗಿಗಳಿಗೆ ಸರ್ಕಾರದಿಂದ ಉತ್ತೇಜನ/ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸರ್ಕಾರವು 13.08.2020 ರಂದು ಹೊಸ ಕೈಗಾರಿಕಾ ನೀತಿ 2020-25 ನ್ನು ಘೋಷಿಸಿರುತ್ತದೆ. ಇದರಡಿಯಲ್ಲಿ ಅನೇಕ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತಿದೆ. ಅವು ಈ ಕೆಳಗಿನಂತಿರುತ್ತವೆ.<br>➢ ಮುದ್ರಾಂಕ ಶುಲ್ಕ ವಿನಾಯಿತಿ<br>➢ ನೋಂದಣಿ ಶುಲ್ಕ ರಿಯಾಯಿತಿ.<br>➢ ಬಂಡವಾಳ ಹೂಡಿಕೆ ಸಹಾಯಧನ<br>➢ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ<br>➢ ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>➢ ರಫ್ತು ಆದಾರಿತ ಘಟಕಗಳಿಗೆ ರಿಯಾಯಿತಿ.<br>➢ ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ.<br>➢ ವಿದ್ಯುತ್ ತೆರಿಗೆ ವಿನಾಯಿತಿ<br>➢ ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಸಹಾಯಧನ<br>➢ ಮಳೆ ನೀರುಕೊಯ್ಲು / ಸಂರಕ್ಷಣೆ ಸಹಾಯಧನ<br>➢ ತಂತ್ರಜ್ಞಾನ ಉನ್ನತೀಕರಣಕ್ಕೆ ಬಡ್ಡಿ ಸಹಾಯಧನ |

| | | |
|---|---|---|
| ಇ | ಕಳೆದ 2 ವರ್ಷಗಳಲ್ಲಿ ಸ್ವಂತ ಕೈಗಾರಿಕೆ ಪ್ರಾರಂಭಿಸಲು ಸರ್ಕಾರದಿಂದ ಆರ್ಥಿಕ ಸಹಾಯ ಪಡೆದುಕೊಂಡ ನಿರುದ್ಯೋಗ ಪದವೀದರರು/ಫಲಾನುಭವಿಗಳೆಷ್ಟು; ಹಾಗೂ ಆರ್ಥಿಕ ಸಹಾಯ/ಸಾಲ ಸೌಲಭ್ಯ ಪಡೆಯಲು ಇರುವ ಮಾನದಂಡಗಳೇನು; ಸರ್ಕಾರದ ಆರ್ಥಿಕ ಯೋಜನೆಗಳು ಫಲಾನುಭವಿಗಳಿಗೆ ತಲುಪುವಂತಾಗಲು ಮಾಡಿಕೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಕಳೆದ 2 ವರ್ಷಗಳಲ್ಲಿ ಸ್ವಂತ ಕೈಗಾರಿಕೆ ಪ್ರಾರಂಭಿಸಲು ಸರ್ಕಾರದಿಂದ ಆರ್ಥಿಕ ಸಹಾಯ ಪಡೆದುಕೊಂಡ ನಿರುದ್ಯೋಗ ಪದವೀದರರು/ ಫಲಾನುಭವಿಗಳ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಇರುವ ಯೋಜನೆಗಳಡಿಯಲ್ಲಿ ಆರ್ಥಿಕ ಸಹಾಯ/ ಸಾಲ ಸೌಲಭ್ಯ ಪಡೆಯಲು ಇರುವ ಮಾನದಂಡಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ.<br><br>ಸರ್ಕಾರದ ಆರ್ಥಿಕ ಯೋಜನೆಗಳು ಫಲಾನುಭವಿಗಳಿಗೆ ತಲುಪುವಂತಾಗಲು ಸರ್ಕಾರವು ಈ ಕೆಳಗಿನ ಕ್ರಮಗಳನ್ನು ಕೈಗೊಂಡಿರುತ್ತದೆ.<br><br>➢ ಅನುದಾನವನ್ನು ಖಜಾನೆ ಕೆ-2 ಮೂಲಕ ಪಾವತಿಸಲಾಗುತ್ತಿದೆ.<br><br>➢ ಕೈಗಾರಿಕಾ ಸಂಘ ಸಂಸ್ಥೆಗಳ ಮೂಲಕ ಕೈಗಾರಿಕಾ ನೀತಿಯಡಿಯಲ್ಲಿ ದೊರೆಯುವ ಪ್ರೋತ್ಸಾಹ ಮತ್ತು ರಿಯಾಯಿತಿಗಳ ಮಾಹಿತಿಯನ್ನು ಎಲ್ಲಾ ಕೈಗಾರಿಕೋದ್ಯಮಿಗಳಿಗೆ ನೀಡಲಾಗುತ್ತಿದೆ. |
| ಈ | ರಾಜ್ಯದ ಯುವ ಕೈಗಾರಿಕೋದ್ಯಮಿಗಳ ಉತ್ತೇಜನಕ್ಕೆ ಸರ್ಕಾರವು ಕೈಗೊಂಡಿರುವ ಯೋಜನೆಗಳಾವುವು; (ಸಂಪೂರ್ಣ ವಿವರ ನೀಡುವುದು) | ರಾಜ್ಯದ ಯುವ ಕೈಗಾರಿಕೋದ್ಯಮಿಗಳ ಉತ್ತೇಜನಕ್ಕೆ ರಾಜ್ಯ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದು ಅವುಗಳ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

**ಸಿಐ 31 ಎಸ್‌ಪಿಐ 2022**

(ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಶ್ರೀ ಸಿ.ಎಂ.ಇಬ್ರಾಹಿಂ, ವಿಧಾನ ಪರಿಷತ್ ಸದಸ್ಯರು ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 59(14) ಕ್ಕೆ

## ಅನುಬಂಧ–1

1. ಪ್ರಧಾನಮಂತ್ರಿಯವರ ಉದ್ಯೋಗ ಸೃಜನೆ ಯೋಜನೆ: (ಮಾರ್ಜಿನ್ ಮನಿ)

| ಅವಧಿ | ಗುರಿ | | ಸಾಧನೆ | |
|---|---|---|---|---|
| | ಭೌತಿಕ | ಆರ್ಥಿಕ ರೂ.ಲಕ್ಷಗಳಲ್ಲಿ | ಭೌತಿಕ | ಆರ್ಥಿಕ ರೂ.ಲಕ್ಷಗಳಲ್ಲಿ |
| 2018–19 | 2813 | 8439.70 | 3366 | 10156.70 |
| 2019–20 | 2967 | 8901.00 | 3560 | 10378.00 |
| 2020–21 | 3523 | 10577.00 | 4384 | 12367.27 |

2. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ 6% ಬಡ್ಡಿ ಸಹಾಯಧನ

| ಅವಧಿ | ಸಾಧನೆ | |
|---|---|---|
| | ಭೌತಿಕ | ಆರ್ಥಿಕ ರೂ.ಲಕ್ಷಗಳಲ್ಲಿ |
| 2018–19 | 58 | 38.50 |
| 2019–20 | 378 | 1776.24 |
| 2020–21 | 505 | 3635.85 |

3. ಉದ್ಯಮಶೀಲತಾ ಜಾಗೃತಿ ಕಾರ್ಯಕ್ರಮಗಳು (ಟೆಕ್ಸಾಕ್ ಸಂಸ್ಥೆಯಿಂದ)

| ಅವಧಿ | ಕಾರ್ಯಕ್ರಮಗಳ ಸಂಖ್ಯೆ | ತರಬೇತಿ ಹೊಂದಿದವರು | ವೆಚ್ಚ ರೂ.ಲಕ್ಷಗಳಲ್ಲಿ |
|---|---|---|---|
| 2020–21 | 31 | 1580 | 136.00 |
| 2021–22 | 8 | 287 | 29.33 |

4. ಪರಿಶಿಷ್ಟ ಜಾತಿಯ ಉದ್ಯಮಶೀಲರಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್

| ಅವಧಿ | ಸಾಧನೆ | |
|---|---|---|
| | ಭೌತಿಕ | ಆರ್ಥಿಕ ರೂ.ಲಕ್ಷಗಳಲ್ಲಿ |
| 2018–19 | 36 | 689.55 |
| 2019–20 | 88 | 2087.85 |
| 2020–21 | 26 | 331.24 |

ಶ್ರೀ ಸಿ.ಎಂ.ಇಬ್ರಾಹಿಂ, ವಿಧಾನ ಪರಿಷತ್ ಸದಸ್ಯರು ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 59(14) ಕ್ಕೆ

ಅನುಬಂಧ-1

5. ಪರಿಶಿಷ್ಟ ವರ್ಗದ ಉದ್ಯಮಶೀಲರಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್

| ಅವಧಿ | ಸಾಧನೆ | |
|---|---|---|
| | ಭೌತಿಕ | ಆರ್ಥಿಕ ರೂ.ಲಕ್ಷಗಳಲ್ಲಿ |
| 2018-19 | 22 | 346.65 |
| 2019-20 | 31 | 398.50 |
| 2020-21 | 8 | 90.80 |

6. ಪರಿಶಿಷ್ಟ ಜಾತಿಯ ಉದ್ಯಮಶೀಲರಿಗೆ ನಿವೇಶನ ಸಹಾಯಧನ

| ಅವಧಿ | ಸಾಧನೆ | |
|---|---|---|
| | ಭೌತಿಕ | ಆರ್ಥಿಕ ರೂ.ಲಕ್ಷಗಳಲ್ಲಿ |
| 2018-19 | 298 | 3233.00 |
| 2019-20 | 137 | 13039.00 |
| 2020-21 | 105 | 13310.50 |

7. ಪರಿಶಿಷ್ಟ ವರ್ಗದ ಉದ್ಯಮಶೀಲರಿಗೆ ನಿವೇಶನ ಸಹಾಯಧನ

| ಅವಧಿ | ಸಾಧನೆ | |
|---|---|---|
| | ಭೌತಿಕ | ಆರ್ಥಿಕ ರೂ.ಲಕ್ಷಗಳಲ್ಲಿ |
| 2018-19 | 87 | 1262.50 |
| 2019-20 | 50 | 60.18 |
| 2020-21 | 35 | 35.30 |

## ಶ್ರೀ ಸಿ.ಎಂ.ಇಬ್ರಾಹಿಂ, ವಿಧಾನ ಪರಿಷತ್ ಸದಸ್ಯರು ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 14(59) ಕ್ಕೆ ಅನುಬಂಧ-2

**ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಇರುವ ಯೋಜನೆಗಳು ಮತ್ತು ಅವುಗಳಡಿಯಲ್ಲಿ ಆರ್ಥಿಕ ಸಹಾಯ/ ಸಾಲ ಸೌಲಭ್ಯ ಪಡೆಯಲು ಇರುವ ಮಾನದಂಡಗಳು:**

**1. ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ : (ಕೇಂದ್ರ ಸರ್ಕಾರ)**

ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯ (ಪಿಎಂಇಜಿಪಿ) ಮುಖ್ಯ ಉದ್ದೇಶ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ, ಸ್ಥಳೀಯ ಸಂಪನ್ಮೂಲಗಳ ಆಧಾರಿಸಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ (ಸೇವಾ ಕ್ಷೇತ್ರ ಮತ್ತು ಉತ್ಪಾದನಾ ಕ್ಷೇತ್ರ) ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವುದು. ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿಯಲ್ಲಿ (ಪಿಎಂಇಜಿಪಿ) ಉತ್ಪಾದನಾ ಚಟುವಟಿಕೆಗೆ ಗರಿಷ್ಠ 25 ಲಕ್ಷಗಳ ಯೋಜನ ವೆಚ್ಚದವರೆಗೂ ಹಾಗೂ ಸೇವಾ ಚಟುವಟಿಕೆಗೆ ಗರಿಷ್ಠ 10 ಲಕ್ಷಗಳ ಯೋಜನ ವೆಚ್ಚದವರೆಗೂ ಬ್ಯಾಂಕ್ ಮುಖಾಂತರ ಸಾಲ ಸೌಲಭ್ಯ ಒದಗಿಸಲಾಗುವುದು.

1. **ತಯಾರಿಕಾ ಚಟುವಟಿಕೆಗಳಿಗೆ ಗರಿಷ್ಠ ಯೋಜನ ವೆಚ್ಚ** : ರೂ.25.00ಲಕ್ಷ
2. **ಸೇವಾ ಚಟುವಟಿಕೆಗಳಿಗೆ ಗರಿಷ್ಠ ಯೋಜನ ವೆಚ್ಚ** : ರೂ.10.00ಲಕ್ಷ
3. **ಶೈಕ್ಷಣಿಕ ವಿದ್ಯಾರ್ಹತೆ:** ಈ ಯೋಜನೆಯಡಿಯಲ್ಲಿ ತಯಾರಿಕಾ ಚಟುವಟಿಕೆಗಳ ಯೋಜನಾ ವೆಚ್ಚ ರೂ.10.00 ಲಕ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ಯೋಜನೆಗಳನ್ನು ಹಾಗೂ ಸೇವಾ ಚಟುವಟಿಕೆಗಳ ಯೋಜನಾ ವೆಚ್ಚ ರೂ.5.00 ಲಕ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ಯೋಜನೆಗಳನ್ನು ಸ್ಥಾಪಿಸಲು ಅಭ್ಯರ್ಥಿಗಳು ಕನಿಷ್ಠ ವಿದ್ಯಾರ್ಹತೆ 8ನೇ ತರಗತಿ ಉತ್ತೀರ್ಣರಾಗಿರಬೇಕು.
4. **ವಯಸ್ಸು :** ಕನಿಷ್ಟ 18 ವರ್ಷ ತುಂಬಿರಬೇಕು
5. **ಪ್ರವರ್ತಕರ ವಂತಿಕೆ:**
   ಸಾಮಾನ್ಯ ವರ್ಗದ ಉದ್ಯಮಶೀಲರು ಯೋಜನಾ ವೆಚ್ಚದ ಶೇ 10% ರಷ್ಟು ಬಂಡವಾಳವಾಗಿ ತೊಡಗಿಸಬೇಕು. ಉದ್ಯಮಶೀಲರು ಪ.ಜಾತಿ/ ಪ.ಪಂಗಡ / ಹಿಂದುಳಿದ ವರ್ಗ/ ಅಲ್ಪಸಂಖ್ಯಾತ /ಮಾಜಿ ಸೈನಿಕ / ಅಂಗವಿಕಲ/ ಮಹಿಳೆ ಆಗಿದ್ದಲ್ಲಿ ಯೋಜನಾ ವೆಚ್ಚದ ಶೇ 5% ರಷ್ಟು ಬಂಡವಾಳ ತೊಡಗಿಸಬೇಕು.
6. **ಸರ್ಕಾರದಿಂದ ಸಹಾಯಧನ (ರೂ.ಲಕ್ಷಗಳಲ್ಲಿ)**

| ಫಲಾನುಭವಿಗಳ ವರ್ಗೀಕರಣ | ಯೋಜನಾ ವೆಚ್ಚದಲ್ಲಿ ಪ್ರವರ್ತಕರ ವಂತಿಗೆ | ಯೋಜನಾ ವೆಚ್ಚದ ಮೇಲೆ ಅರ್ಹತೆಯಿರುವ ಸಹಾಯಧನ | |
|---|---|---|---|
| | | ನಗರ | ಗ್ರಾಮೀಣ |
| ಸಾಮಾನ್ಯ ವರ್ಗ | ಶೇ.10% | ಶೇ. 15% (ಗರಿಷ್ಟ ರೂ.3.75ಲಕ್ಷ) | ಶೇ. 25% (ಗರಿಷ್ಟ ರೂ. 6.25 ಲಕ್ಷ) |
| ವಿಶೇಷ ವರ್ಗ (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಹಿಂದುಳಿದವರು/ ಅಲ್ಪಸಂಖ್ಯಾತರು/ ಮಹಿಳೆ/ ಮಾಜಿಯೋಧರು/ ಅಂಗವಿಕಲರು) | ಶೇ.5% | ಶೇ. 25% (ಗರಿಷ್ಟ ರೂ.6.25ಲಕ್ಷ) | ಶೇ. 35% (ಗರಿಷ್ಟ ರೂ. 8.75 ಲಕ್ಷ) |

7. **ಆದಾಯದ ಮಿತಿ:** ಈ ಯೋಜನೆಯಡಿಯಲ್ಲಿ ಉದ್ದಿಮೆಗಳನ್ನು ಸ್ಥಾಪಿಸಲು ಸಾಲ ಸೌಲಭ್ಯ ಪಡೆಯಲು ಯಾವುದೇ ಆದಾಯದ ಮಿತಿ ಇರುವುದಿಲ್ಲ.
8. **ಇತರೆ ಷರತ್ತುಗಳು:** ಈ ಯೋಜನೆಯಡಿಯಲ್ಲಿ ಪ್ರಥಮ ಪೀಳಿಗೆ ಉದ್ಯಮಶೀಲರುಗಳು ಪ್ರಾರಂಭಿಸುವ ಹೊಸ ಘಟಕಗಳಿಗೆ ಮಾತ್ರ ಸಹಾಯಧನ ಲಭ್ಯವಿದೆ.

## 2. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಹೊಸ ಹೂಡಿಕೆಗಾಗಿ ಸಾಲ ಪಡೆದು ಸ್ಥಾಪನೆಗೊಳ್ಳುವ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕೆಗಳಿಗೆ ಶೇ.6% ಬಡ್ಡಿ ಸಹಾಯಧನ ಯೋಜನೆ

1. **ಯೋಜನೆಯ ಅನ್ವಯ :**
   1. ಈ ಯೋಜನೆಯು ಕೆ.ಎಸ್.ಎಫ್.ಸಿ ಯಿಂದ ವಿಸ್ತರಣೆ / ಆಧುನೀಕರಣ / ವೈರುದ್ಧೀಕರಣ / ತಾಂತ್ರಿಕ ಉನ್ನತೀಕರಣ ಮೂಲಕ ಕಟ್ಟಣ ಮತ್ತು ಯಂತ್ರೋಪಕರಣಗಳಲ್ಲಿ ಹೂಡಿಕೆಗಾಗಿ ಸಾಲ ಪಡೆಯುವ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕಾ ಘಟಕಗಳಿಗೆ ಮಾತ್ರ ಅನ್ವಯಿಸುತ್ತದೆ.
   2. ಕರ್ನಾಟಕ ಸರ್ಕಾರ/ ಭಾರತ ಸರ್ಕಾರದ ಯಾವುದೇ ಯೋಜನೆಯಡಿ ಬಡ್ಡಿ ಸಹಾಯಧನ ಪಡೆದ ಘಟಕಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹವಿರುವುದಿಲ್ಲ.
   3. ಈ ಯೋಜನೆಯು ದುಡಿಮೆ ಬಂಡವಾಳ ಸಾಲಕ್ಕೆ ಅನ್ವಯಿಸುವುದಿಲ್ಲ.

2. **ಸಾಲದ ಮೊತ್ತ :**
   1. **ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಘಟಕಗಳಿಗೆ :** ರೂ.500.00 ಲಕ್ಷ ಅವಧಿ ಸಾಲ (ಕಟ್ಟಡ ಮತ್ತು ಉತ್ಪಾದನೆಗೆ ನೇರವಾಗಿ ಉಪಯೋಗಿಸುವ ಯಂತ್ರೋಪಕರಣ ಮೇಲೆ)
   2. ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕೆಗಳಿಗೆ ಸಾಲದ ಮೊತ್ತವು ರೂ.500.00 ಲಕ್ಷ ಮೀರಿದಲ್ಲಿ, ಬಡ್ಡಿ ಸಹಾಯಧನಕ್ಕೆ ಸಾಲದ ಮೊತ್ತವನ್ನು ರೂ.500.00 ಲಕ್ಷಗಳವರೆಗೆ ಪರಿಗಣಿಸಿ, ಹೆಚ್ಚುವರಿ ಸಾಲದ ಮೊತ್ತಕ್ಕೆ ಕೆ.ಎಸ್.ಎಫ್.ಸಿಯ ಒಪ್ಪಂದಿತ ಬಡ್ಡಿದರ (contract rate of interest) ವಿಧಿಸಲಾಗುವುದು.
   3. ಘಟಕವು ಕೆ.ಎಸ್.ಎಫ್.ಸಿ ಯಿಂದ 'ಕಾಂಪೋಸಿಟ್ ಸಾಲ' ಪಡೆದಿದ್ದಲ್ಲಿ ಅದರಲ್ಲಿ 'ಅವಧಿ ಸಾಲ'ದ ಮೊತ್ತ ಅನ್ವಯವಾಗುವ ಕಟ್ಟಡ ಮತ್ತು ಉತ್ಪಾದನೆಗೆ ನೇರವಾಗಿ ಉಪಯೋಗಿಸುವ ಯಂತ್ರೋಪಕರಣ ಮೇಲೆ ಅನ್ವಯಿಸುತ್ತದೆ.

3. **ಸಹಾಯಧನದ ಬಿಡುಗಡೆ :** ಬಡ್ಡಿ ಸಹಾಯಧನವನ್ನು ಮುಂಗಡವಾಗಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ನೇರವಾಗಿ ಬಿಡುಗಡೆ ಮಾಡುವುದು. ಈ ಬಡ್ಡಿ ಸಹಾಯಧನವನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಅರ್ಹ ಘಟಕಗಳಿಗೆ ಆಯಾ ತಿಂಗಳು ಸರ್ಕಾರ ಬಿಡುಗಡೆ ಮಾಡಿದ ಅನುದಾನದಿಂದ ಭರಿಸುವುದು.

## ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಇರುವ ಕಾರ್ಯಕ್ರಮಗಳು:

### 1. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ / ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ರವರುಗಳಿಂದ ಹಂಚಿಕೆಯಾಗುವ ನಿವೇಶನ/ಪ್ಲಾಟ್/ಶೆಡ್‌ಗಳಿಗೆ ಶೇ.75ರಷ್ಟು ರಿಯಾಯಿತಿ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ದಿಮೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳಿಂದ ಹಂಚಿಕೆಯಾಗುವ ಕೈಗಾರಿಕಾ ನಿವೇಶನ/ಪ್ಲಾಟ್/ಶೆಡ್‌ಗಳನ್ನು ಶೇ.50 ರಷ್ಟು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಇನ್ನುಳಿದ ಶೇ.50 ರ ದರದಲ್ಲಿ ಮೊದಲಿಗೆ ಶೇ.25 ರಷ್ಟು ಮೊತ್ತವನ್ನು ಪಾವತಿಸಿ, ಇನ್ನುಳಿದ ಮೊತ್ತವನ್ನು 8 ತ್ರೈಮಾಸಿಕ ಸಮ ಕಂತುಗಳಲ್ಲಿ ಭರಿಸಬೇಕಾಗುವುದು.

### 2. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ರವರುಗಳಿಂದ ಹಂಚಿಕೆಯಾಗುವ ನಿವೇಶನ/ಪ್ಲಾಟ್/ಶೆಡ್‌ಗಳಿಗೆ ರಿಯಾಯಿತಿ.

ಮೊದಲನೇ ಹಂತದಲ್ಲಿ ಚಾಮರಾಜನಗರ, ಚಿತ್ರದುರ್ಗ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ 20, 24, 40 'ಡಿ' ಮಾದರಿಯ ಮಳಿಗೆಗಳನ್ನು ಸಣ್ಣ, ಅತಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಶೇ.90 ರಷ್ಟು ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲಾಗಿದೆ.

2017-18ನೇ ಸಾಲಿನಿಂದ ಈ ಯೋಜನೆಯನ್ನು 'ಸಿ' ಮಾದರಿ ಮಳಿಗೆಗಳಿಗೂ ವಿಸ್ತರಿಸಲಾಗಿದ್ದು ಕಟ್ಟಡ ನಿರ್ಮಾಣದ ವೆಚ್ಚದ ಶೇ.90ರಷ್ಟು ರಿಯಾಯಿತಿ ದರದಲ್ಲಿ ಹಾಗೂ ನಿವೇಶನದ ದರದಲ್ಲಿ ಶೇ.50ರಷ್ಟು ರಿಯಾಯಿತಿಯಂತೆ ಹಂಚಿಕೆ ಮಾಡಲಾಗುತ್ತಿದೆ.

### 3. ಅತೀ ಸಣ್ಣ/ಸಣ್ಣ ಕೈಗಾರಿಕಾ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ:

ಈ ಯೋಜನೆಯಡಿ ಪ.ಜಾ/ಪ.ಪಂ. ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ/ಆಧುನೀಕರಣ/ತಾಂತ್ರಿಕ ಉನ್ನತೀಕರಣ/ವಿಸ್ತರಣೆ/ಚಟುವಟಿಕೆ ಬದಲಾವಣೆ ಘಟಕಗಳಿಗೆ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3

(ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿ ರಹಿತ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುವುದು.

ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲೆ ಹೂಡಿದ ಬಂಡವಾಳವು ರೂ.5.00 ಕೋಟಿಗೊಳಪಡುವ ಘಟಕಕ್ಕೆ – ಡೆಟ್ ಈಕ್ವಿಟಿ 2:1 ರಂತೆ, ಪ್ರವರ್ತಕರ ಬಂಡವಾಳ ಗರಿಷ್ಠ ರೂ.75.00 ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುವುದು.

28.9.2018ರ ನಂತರ ಮೊದಲನೇ ಕಂತಿನ ಸಾಲ ಬಿಡುಗಡೆಯಾದ ಪ್ರಕರಣಗಳಿಗೆ ಯೋಜನಾ ವೆಚ್ಚದ ರೂ.200.00 ಲಕ್ಷಕ್ಕೆ ಸೀಮಿತಗೊಳಿಸಿದೆ ಹಾಗೂ ಹೊಸ ಘಟಕ ಸ್ಥಾಪಿಸಲು ಮೊದಲನೇ ಪೀಳಿಗೆ ಉದ್ದಿಮೆದಾರರಿಗೆ ಈ ಸೌಲಭ್ಯ ನೀಡಲಾಗುವುದು.

4. ಗುಡಿ ಮತ್ತು ಸೂಕ್ಷ್ಮ ಕೈಗಾರಿಕಾ ಘಟಕಗಳು / ಕುಶಲಕರ್ಮಿಗಳಿಗೆ ಬ್ಯಾಂಕಿನ ಸಾಲದ ಮೇಲೆ ಸಹಾಯಧನ ಕಾರ್ಯಕ್ರಮ:
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳು ಗುಡಿ ಮತ್ತು ಅತೀ ಸೂಕ್ಷ್ಮ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಹಣಕಾಸು ಸಂಸ್ಥೆ/ವಾಣಿಜ್ಯ ಬ್ಯಾಂಕ್‌ಗಳಿಂದ ಮಂಜೂರಾದ ಸಾಲದ ಮೇಲೆ, ಇಲಾಖೆ ವತಿಯಿಂದ ರೂ.10.00ಲಕ್ಷ ಮೀರದಂತೆ ಇರುವ ಯೋಜನೆಗಳಿಗೆ, ಯೋಜನಾ ವೆಚ್ಚದ ಮೇಲೆ ಶೇ.60 ರಷ್ಟು ಗರಿಷ್ಠ ರೂ.5.00 ಲಕ್ಷಗಳವರೆಗೂ ಸಹಾಯಧನವನ್ನು ಮಂಜೂರು ಮಾಡಲಾಗುವುದು.

ಈ ಯೋಜನೆಯಡಿ ಸ್ಥಾಪಿಸಲ್ಪಡುವ ಘಟಕಗಳಿಗೆ ಮೊದಲನೇ ಸಾಲದ ಕಂತು ಬಿಡುಗಡೆಯಾದ 2 ವರ್ಷಗಳ ನಂತರ ಘಟಕಗಳ ಪರಿಶೀಲನೆ ನಡೆಸಿ, ಕಾರ್ಯನಿರ್ವಹಿಸುತ್ತಿರುವ ಘಟಕಗಳ ಸಹಾಯಧನವನ್ನು ಫಲಾನುಭವಿಯ ಸಾಲದ ಖಾತೆಗೆ ಜಮಾ ಮಾಡಲಾಗುತ್ತದೆ.

5. ಕೌಶಲ್ಯ ತರಬೇತಿ:
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಎಸ್‌ಎಸ್‌ಎಲ್‌ಸಿ ಉತ್ತೀರ್ಣ/ಅನುತ್ತೀರ್ಣ ಕನಿಷ್ಠ 16 ವರ್ಷ ಗರಿಷ್ಠ 45 ವರ್ಷದೊಳಗಿನ ನಿರುದ್ಯೋಗಿ ಯುವ ಜನರಿಗೆ ಇಲಾಖೆ ವತಿಯಿಂದ ಸ್ಥಾಪಿತವಾದ/ಪ್ರಾಯೋಜಿತವಾದ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಗಳ ಮೂಲಕ ಕೈಗಾರಿಕೆಗೆ ಅವಶ್ಯಕತೆ ಇರುವ ಮಾನವ ಸಂಪನ್ಮೂಲ ಒದಗಿಸಲು ಹಾಗೂ ಸ್ವಯಂ ಉದ್ಯೋಗ ಸ್ಥಾಪನೆಗಾಗಿ 03, 04 ಮತ್ತು 6 ತಿಂಗಳ ಅವಧಿಯ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಲಾಗುವುದು.

6. ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಇತರೆ ಶುಲ್ಕಗಳನ್ನು ಮರುಪಾವತಿಸುವುದು ಮತ್ತು ವಿದ್ಯುತ್‌ಚ್ಛಕ್ತಿ ಸಹಾಯಧನ:
ದಿನಾಂಕ:01-04-2017 ರಿಂದ ಮೊದಲ ಬಾರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಘಟಕಗಳಿಗೆ ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಘಟಕಗಳೂ ಸಾಲ ಪಡೆಯುವ ಸಂದರ್ಭದಲ್ಲಿ ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿವರಣಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಭರಿಸುವುದು.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಿಗಳು ಸ್ಥಾಪಿಸುವ ದಿನಾಂಕ:01-04-2017 ರಿಂದ ಪ್ರಾರಂಭವಾಗಿರುವ ಹೊಸ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಷಗಳ ಅವಧಿಗೆ ಯುನಿಟ್‌ಗೆ 2 ರೂ.ಗಳಷ್ಟು ವಿದ್ಯುಚ್ಛಕ್ತಿ ಸಹಾಯಧನ ನೀಡಲಾಗುವುದು.

**ಹಿಂದುಳಿದ ವರ್ಗದವರಿಗೆ (ಪ್ರವರ್ಗ – 1, 2ಎ, ಮತ್ತು 2ಬಿ) ಶೇ 25% ರಿಯಾಯಿತಿಯಲ್ಲಿ ಕೆ.ಐ.ಎ.ಡಿ.ಬಿ/ ಕೆ.ಎಸ್.ಎಸ್.ಐ.ಡಿ.ಸಿ ನಿವೇಶನ ಹಂಚಿಕೆ**

28.12.2017 ರ ನಂತರ ಹಿಂದುಳಿದ ವರ್ಗದ ಉದ್ಯಮಶೀಲರು ಕೆ.ಐ.ಎ.ಡಿ.ಬಿ / ಕೆ.ಎಸ್.ಎಸ್.ಐ.ಡಿ.ಸಿ ಯಿಂದ ನಿವೇಶನ/ ಶೆಡ್‌ಗಳ ಹಂಚಿಕೆ ಪಡೆದಿದ್ದಲ್ಲಿ ಅವರಿಗೆ ಅವುಗಳ ಒಟ್ಟು ಮೊತ್ತದಲ್ಲಿ ಶೇ 25% ರಿಯಾಯತಿ ನೀಡಲಾಗುವುದು.

## ಹೊಸ ಕೈಗಾರಿಕಾ ನೀತಿ 2020-25 ರಡಿಯಲ್ಲಿ ಎಂ.ಎಸ್.ಎಂ.ಇ ಗಳಿಗೆ ದೊರೆಯುವ ಪ್ರೋತ್ಸಾಹ ಮತ್ತು ರಿಯಾಯಿತಿಗಳು:

<table>
<tr><th>ಉತ್ತೇಜನದ ಮಾದರಿ</th><th>ಸಾಮಾನ್ಯ ಪ್ರವರ್ಗ</th><th>ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಉದ್ಯಮಶೀಲ ಸೈನಿಕರು)</th></tr>
<tr><td rowspan="2">ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ</td><td>ಸೂಕ್ಷ್ಮ ಕೈಗಾರಿಕೆಗಳು<br><br>ವಲಯ 1: ವಿಎಫ್‌ಎಯ 30% (ಗರಿಷ್ಠ ರೂ.25ಲಕ್ಷ)<br>ವಲಯ 2: ವಿಎಫ್‌ಎಯ 25% (ಗರಿಷ್ಠ ರೂ.20ಲಕ್ಷ)<br>ವಲಯ 3: ಇಲ್ಲ<br><br>ಸಣ್ಣ ಕೈಗಾರಿಕೆಗಳು<br>ವಲಯ 1: ವಿಎಫ್‌ಎಯ 25% (ಗರಿಷ್ಠ ರೂ.100ಲಕ್ಷ)<br>ವಲಯ 2: ವಿಎಫ್‌ಎಯ 20% (ಗರಿಷ್ಠ ರೂ.90ಲಕ್ಷ)<br>ವಲಯ 3: ಇಲ್ಲ<br><br>ವಿಎಫ್‌ಎ –ಸ್ಥಿರಾಸ್ತಿಯ ಮೌಲ್ಯ</td><td>ಸೂಕ್ಷ್ಮ ಕೈಗಾರಿಕೆಗಳು<br><br>ವಲಯ 1: ವಿಎಫ್‌ಎಯ 35% (ಗರಿಷ್ಠ ರೂ.30ಲಕ್ಷ)<br>ವಲಯ 2: ವಿಎಫ್‌ಎಯ 30% (ಗರಿಷ್ಠ ರೂ.25ಲಕ್ಷ)<br>ವಲಯ 3: ವಿಎಫ್‌ಎನ 10% (ಗರಿಷ್ಠ ರೂ.10ಲಕ್ಷ)<br><br>ಸಣ್ಣ ಕೈಗಾರಿಕೆಗಳು<br>ವಲಯ 1: ವಿಎಫ್‌ಎಯ 30% (ಗರಿಷ್ಠ ರೂ.105ಲಕ್ಷ)<br>ವಲಯ 2: ವಿಎಫ್‌ಎಯ 25% (ಗರಿಷ್ಠ ರೂ.95ಲಕ್ಷ)<br>ವಲಯ 3: ವಿಎಫ್‌ಎನ 10% (ಗರಿಷ್ಠ ರೂ.25ಲಕ್ಷ)<br><br>ವಲಯ 1 ಮತ್ತು 2 ರಲ್ಲಿ ವಿಎಫ್‌ಎಯ 5% ಹೆಚ್ಚುವರಿ ಸಬ್ಸಿಡಿ ಗರಿಷ್ಠ ರೂ.5 ಲಕ್ಷ</td></tr>
<tr><td colspan="2">ಸೂಚನೆ:<br>ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಪ್ರತೀ ಆರ್ಥಿಕ ವರ್ಷದಲ್ಲಿ ವಹಿವಾಟಿನ ಶೇ.10 ರಷ್ಟು ಹೂಡಿಕೆ ಉತ್ತೇಜನ ಸಬ್ಸಿಡಿಯನ್ನು ಪಡೆಯಬಹುದು ಮತ್ತು ಈ ಸಹಾಯಧನವನ್ನು ವಾಣಿಜ್ಯ ಉತ್ಪಾದನೆ ಆರಂಭಿಸಿದ ದಿನಾಂಕದಿಂದ ಗರಿಷ್ಠ 5 ಆರ್ಥಿಕ ವರ್ಷಗಳವರೆಗೆ ವಿಸ್ತರಿಸಬಹುದು. ಇಂತಹ ಸಂಚಿತ ಹೂಡಿಕೆ ಉತ್ತೇಜನಾ ಸಬ್ಸಿಡಿಯು ಮೇಲ್ಕಾಣಿಸಿದ ಗರಿಷ್ಠ ಮಿತಿಗೆ ಒಳಪಟ್ಟಿರುತ್ತದೆ. ಈ ಹೂಡಿಕೆ ಉತ್ತೇಜನಾ ಸಬ್ಸಿಡಿಯ ಮಿತಿಯು ಅವಧಿ ಮುಗಿಯುವವರೆಗೆ (5ಆರ್ಥಿಕ ವರ್ಷಗಳವರೆಗೆ )ಅಥವಾ ಮಿತಿ ಮುಗಿಯುವವರೆಗೆ ಯಾವುದು ಮೊದಲೋ ಅಲ್ಲಿವರೆಗೆ ಅನ್ವಯವಾಗುತ್ತದೆ ಮತ್ತು ಇದನ್ನು ಮುಂದೂಡುವಂತಿಲ್ಲ.</td></tr>
<tr><td>ಮಧ್ಯಮ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಬ್ಸಿಡಿ<br><br>ಮೊದಲ 10 ಕೋಟಿ ರೂಗಳಿಗೆ ಕನಿಷ್ಠ ಉದ್ಯೋಗಾವಕಾಶ ಸಂಖ್ಯೆ 20 ಮತ್ತು ಮುಂದಿನ ಹೆಚ್ಚುವರಿ ಪ್ರತೀ ರೂ.10 ಕೋಟಿಗೆ ಹೆಚ್ಚುವರಿ 7 ಉದ್ಯೋಗಾವಕಾಶ ಪ್ರಮಾಣಾನುಪಾತದಂತೆ</td><td colspan="2">ಮಧ್ಯಮ ಕೈಗಾರಿಕೆಗಳು<br><br><table><tr><th>ವಲಯ</th><th>ಶೇಕಡಾವಾರು ವಹಿವಾಟು</th><th>ಗರಿಷ್ಠ ಅವಧಿ (ವರ್ಷ)</th><th>ವಿಎಫ್‌ಎ ಮಿತಿ</th></tr><tr><td>1</td><td rowspan="2">2.50%</td><td>6</td><td>ವಿಎಫ್‌ಎಯ 40 %</td></tr><tr><td>2</td><td>5</td><td>ವಿಎಫ್‌ಎಯ 35 %</td></tr><tr><td>3</td><td colspan="3">ಇಲ್ಲ</td></tr></table><br>ಸೂಚನೆ:<br>ಮಧ್ಯಮ ಕೈಗಾರಿಕೆಗಳು ಹೂಡಿಕೆ ಉತ್ತೇಜನ ಸಬ್ಸಿಡಿಯನ್ನು ಪ್ರತೀ ಆರ್ಥಿಕ ವರ್ಷದಲ್ಲಿ ವಹಿವಾಟಿನ ಶೇಕಡಾವಾರು ಪಡೆಯಬಹುದಾಗಿದ್ದು ಮೇಲ್ಕಾಣಿಸಿದಂತೆ ವಾಣಿಜ್ಯ ಉತ್ಪಾದನೆ ಆರಂಭಿಸಿದ ಗರಿಷ್ಠ ಅವಧಿಗೆ ಅನ್ವಯವಾಗುವುದು. ಇಂತಹ ಸಂಚಿತ ಹೂಡಿಕೆ ಉತ್ತೇಜನಾ ಸಬ್ಸಿಡಿಯು ವಿಎಫ್‌ಎ ಮಿತಿ ಅಥವಾ ಅವಧಿ ಮುಗಿಯುವವರೆಗೆ ಯಾವುದು ಮೊದಲೋ ಅಲ್ಲಿವರೆಗೆ ಅನ್ವಯವಾಗುತ್ತದೆ ಮತ್ತು ಇದನ್ನು ಮುಂದೂಡುವಂತಿಲ್ಲ.<br>ಕಡಿಮೆ ಉದ್ಯೋಗಾವಕಾಶ ಒದಗಿಸಲು ಬಯಸುವ ಮಧ್ಯಮ ಕೈಗಾರಿಕೆಗಳು/ಹೂಡಿಕೆಗೆ ತಕ್ಕಂತೆ ನಿಗದಿಪಡಿಸಿದ ಉದ್ಯೋಗಾವಕಾಶ ನೀಡಲು ಸಾಧ್ಯವಾಗದ ಕೈಗಾರಿಕೆಗಳಿಗೆ ಒಟ್ಟು ಒದಗಿಸಿದ ಉದ್ಯೋಗಾವಕಾಶಕ್ಕೆ ಅನುಗುಣವಾಗಿ ವಹಿವಾಟು ಶೇಕಡಾವಾರು ಪ್ರಮಾಣ ಕಡಿಮೆ ಆಗುವುದು. ಹೀಗಿದ್ದರೂ ಗರಿಷ್ಠ ಅವಧಿ ಮತ್ತು ವಿಎಫ್‌ಎ ಮೇಲ್ಕಂಡಂತೆ ಇರಲಿದೆ.</td></tr>
<tr><td>ಎಂಎಸ್‌ಎಂಇಗಳಿಗೆ ಸ್ಟಾಂಪ್ ಶುಲ್ಕ(ಡ್ಯೂಟಿ) ವಿನಾಯಿತಿ</td><td colspan="2">ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ:<br>ರಾಜ್ಯ ಹಣಕಾಸು ನಿಗಮ, ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಗಳು,ವಾಣಿಜ್ಯ ಬ್ಯಾಂಕ್‌ಗಳು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು, ಸಹಕಾರಿ ಬ್ಯಾಂಕ್‌ಗಳು, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಮಂಡಳಿ, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಆಯೋಗ(ಕಮಿಷನ್), ಕರ್ನಾಟಕ ರಾಜ್ಯ ಪ.ಜಾತಿ/ಪ.ವರ್ಗ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಮತ್ತಿತರ ಸಂಸ್ಥೆಗಳಿಂದ ಸಾಲ ಪಡೆಯಲಿಕ್ಕಾಗಿ ಸಾಲ ಒಪ್ಪಂದ, ಸಾಲ ಕರಾರು ಪತ್ರ, ಅಡಮಾನ, ಅಡಮಾನಿಕೆ ದಸ್ತಾವೇಜುಗಳಿಗಾಗಿ ಸರ್ಕಾರ ಕಾಲಾನುಕ್ರಮವಾಗಿ ಹೊರಡಿಸುವ ಅಧಿಸೂಚನೆಗಳಿಗೆ ಅನುಗುಣವಾಗಿ ನೀಡಬೇಕಾದ ಸ್ಟಾಂಪ್ ಶುಲ್ಕದಿಂದ ಆರಂಭದ 5 ವರ್ಷಗಳ ಕಾಲ ಮಾತ್ರ ವಿನಾಯಿತಿ ನೀಡಲಾಗುವುದು.<br><br>ಕೈಗಾರಿಕೋದ್ಯಮಿಗಳು, ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನೆಮೆಂಟ್ಸ್ ಮತ್ತು ಬಹುಮಹಡಿ ಸಂಕೀರ್ಣದ ಕಾರ್ಖಾನೆಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಕಿಯಾನಿಕ್ಸ್, ಕೈಗಾರಿಕಾ ಸಹಕಾರ ಸಂಘಗಳು, ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತುಗಳು/ಪಾರ್ಕ್‌ಗಳು, ಆಹಾರ ಪಾರ್ಕ್‌ಗಳು, ಕರ್ನಾಟಕ/ಭಾರತ ಸರ್ಕಾರದಿಂದ ರಚಿಸಲಾದ ವಿಶೇಷ ಉದ್ದೇಶ ವಾಹನ(ಎಸ್/ಪಿ.ವಿ)ಗಳಿಂದ ಹಂಚಿಕೆ ಪಡೆಯುವಲ್ಲಿ ಕೈಗಾರಿಕಾ ಉದ್ದಿಮೆಗಳು ಮಾಡಿಕೊಂಡ ಭೋಗ್ಯ ಪತ್ರ (ಲೀಸ್ ಡೀಡ್), ಭೋಗ್ಯ ಮತ್ತು ಕ್ರಯ ಪತ್ರ, ಉಪ-ಭೋಗ್ಯ(ಸಬ್ ಲೀಸ್) ಹಾಗೂ ಪರಿಪೂರ್ಣ ಕ್ರಯ ಪತ್ರಗಳಿಗೂ ಈ ಕೆಳಗಿನಂತೆ ವಿನಾಯಿತಿ ನೀಡಬೇಕು.</td></tr>
</table>

2. ಕರ್ನಾಟಕ

| ಉತ್ತೇಜನದ ಮಾದರಿ | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿಉದ್ಯಮಶೀಲ ಸೈನಿಕರು. |
|---|---|---|
| | ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| ಎಂಎಸ್ಎಂಇಗಳಿಗೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ | ವಲಯ1, ವಲಯ 2 : ರೂ.1000/-ಕ್ಕೆ ರೂ.1/-<br>ವಲಯ 3 : ಇಲ್ಲ | ಎಲ್ಲಾ ವಲಯಗಳಿಗೆ :ರೂ.1000/-ಕ್ಕೆ ರೂ.1/- |
| | ಸೂಚನೆ:<br>1. ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿಗಳು ಕೆಎಲ್ಆರ್ ಕಾಯ್ದೆ 1961ರ ಸೆಕ್ಷನ್ 109ರ ಅಡಿಯಲ್ಲಿ ಖರೀದಿಸಿದ ಭೂಮಿ, ಹಾಗೂ ಎಸ್ಎಲ್‌ಡಬ್ಲ್ಯುಸಿಸಿ/ಡಿಎಲ್‌ಡಬ್ಲ್ಯುಸಿಸಿ ಅನುಮೋದಿತ ಯೋಜನೆಗಳ ಕೈಗಾರಿಕಾ ಭೂಪರಿವರ್ತಿತ ಭೂಮಿಯ ನೇರ ಖರೀದಿಗೂ ಅನ್ವಯವಾಗುವುದು. ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರವಾಗಿ ಕೆಐಎಡಿಬಿ ಭೂ ಮಾಲೀಕರಿಗೆ ನೀಡುವ ಭೂಮಿಗೂ ಈ ರಿಯಾಯಿತಿ/ವಿನಾಯಿತಿ ನೀಡಲಾಗುವುದು.<br>2. ಭೂಮಿ,ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್‌ಗಳಿಗೆಭೋಗ್ಯದ ಅವಧಿ ಮುಗಿದ ಬಳಿಕ ಅಂತಿಮ ಕ್ರಯ ಪತ್ರ (ಸೇಲ್ ಡೀಡ್)ದ ನೋಂದಣಿಗೂ ಕೈಗಾರಿಕಾ ನೀತಿಯಲ್ಲಿ ನಮೂದಿಸಿರುವಂತೆ ಭೋಗ್ಯ ಮತ್ತು ಕ್ರಯಪತ್ರ (ಲೀಸ್ ಕಮ್ ಸೇಲ್ ಡೀಡ್) ಮಾಡುವ ವೇಳೆ ಚಾಲ್ತಿಯಲ್ಲಿದ್ದ ಪ್ರಕಾರ ಸ್ಟಾಂಪ್ ಶುಲ್ಕ ವಿನಾಯ್ತಿ ಮತ್ತು ನೋಂದಣಿ ಶುಲ್ಕಗಳಲ್ಲಿ ರಿಯಾಯ್ತಿ ಲಭ್ಯವಾಗುವುದು. | |
| ಎಂಎಸ್ಎಂಇಗಳಿಗೆ ಭೂ ಪರಿವರ್ತನಾ ಶುಲ್ಕ ಮರುಪಾವತಿ | ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| ಎಂಎಸ್ಎಂಇಗಳಿಗೆ ವಿದ್ಯುತ್‌ಶುಲ್ಕದ ಮೇಲಿನ ತೆರಿಗೆ ವಿನಾಯಿತಿ | ವಲಯ 1 : 100% 7 ವರ್ಷದವರೆಗೆ<br>ವಲಯ 2 : 100% 6 ವರ್ಷದವರೆಗೆ<br>ವಲಯ 3 : ಇಲ್ಲ | ವಲಯ1 : 100% 8 ವರ್ಷದವರೆಗೆ<br>ವಲಯ 2 : 100% 7 ವರ್ಷದವರೆಗೆ<br>ವಲಯ 3 : 100% 4 ವರ್ಷದವರೆಗೆ |
| ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ | ವಲಯ 1 ಮತ್ತು 2ಕ್ಕೆ ಮಾತ್ರ: ಬಳಸಿದ ಪ್ರತಿ ವಿದ್ಯುತ್ ಯುನಿಟ್ ಒಂದಕ್ಕೆ ಪಾವತಿಸಿದ ವಿದ್ಯುತ್ ಶುಲ್ಕಕ್ಕೆ ರೂ.1/-ರಂತೆ 3 ವರ್ಷಗಳ ಅವಧಿವರೆಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ. | |
| ಕುಶಲಕರ್ಮಿಗಳಿಗೆ ಬೆಂಬಲ | 1. ಕುಶಲಕರ್ಮಿಗಳಿಗೆ ಶೇ. 4% ಬಡ್ಡಿದರದಲ್ಲಿ ಅವಧಿ ಸಾಲ(ಟರ್ಮ್ ಲೋನ್) ಮತ್ತು ದುಡಿಮೆ ಬಂಡವಾಳ ಸಾಲ.<br>2. ಕುಶಲಕರ್ಮಿಗಳ ಕರಕುಶಲ ವಸ್ತುಗಳ ವಹಿವಾಟಿನ ಮೇಲೆ ಶೇ. 10%ರಷ್ಟು ಮಾರುಕಟ್ಟೆ ಅಭಿವೃದ್ಧಿ ನೆರವು (ಎಂಡಿಎ)<br>3. ಕರಕುಶಲ ಸಂಘಟನೆಗಳಿಗೆ, ಕರಕುಶಲ ಕಾಂಪ್ಲೆಕ್ಸ್‌ಗಳಿಗೆ,ಸಮೂಹ ಮೊದಲಾದವುಗಳಿಗೆ ಯಂತ್ರೋಪಕರಣಗಳು,ಬಿಡಿ ಭಾಗಗಳಿಗೆ 75% ಅನುದಾನ | |

| ಎಂಎಸ್ಎಂಇಗಳಿಗೆ ತಂತ್ರಜ್ಞಾನ ಅಳವಡಿಕೆ ಮತ್ತು ನವೋನ್ವೇಷಣೆ | | |
|---|---|---|
| | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕ ಉದ್ಯಮಿಗಳು) |
| ತಂತ್ರಜ್ಞಾನ ಮೇಲ್ದರ್ಜೆಗೇರಿಸುವ ಸಾಲದ ಮೇಲೆ ಬಡ್ಡಿ ಸಹಾಯಧನ | ವಲಯ1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ-ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ | ವಲಯ 1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ-ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ |
| ತಂತ್ರಜ್ಞಾನ ಅಳವಡಿಕೆಗೆ | ಎಲ್ಲಾ ವಲಯಗಳಿಗೆ<br>ವೆಚ್ಚದ 25% (ಗರಿಷ್ಠ ರೂ.50,000/-) ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ | ಎಲ್ಲಾ ವಲಯಗಳಿಗೆ<br>ವೆಚ್ಚದ 50% (ಗರಿಷ್ಠ ರೂ.1 ಲಕ್ಷ )ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ . |

| ಎಂಎಸ್‌ಎಂಇಗಳಿಗೆ ತಂತ್ರಜ್ಞಾನ ಅಳವಡಿಕೆ ಮತ್ತು ನವೋನ್ವೇಷಣೆ | | |
|---|---|---|
| | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕ ಉದ್ಯಮಿಗಳು) |
| ತಂತ್ರಜ್ಞಾನ ವ್ಯವಹಾರ ವಿಕಸನ ಕೇಂದ್ರ (ಟಿಬಿಐಸಿ) | ಎಲ್ಲಾ ವಲಯಗಳಿಗೆ<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಠ ರೂ.50.00 ಲಕ್ಷ) (ವಲಯ 1 ರಲ್ಲಿ ಕನಿಷ್ಠ 1 ಟಿಬಿಐಸಿ ) | ಎಲ್ಲಾ ವಲಯಗಳಿಗೆ<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಠರೂ.60.00 ಲಕ್ಷ)(ವಲಯ 1 ರಲ್ಲಿ ಕನಿಷ್ಠ 1 ಟಿಬಿಐಸಿ ) |
| ಗುಣಮಟ್ಟ ಪ್ರಮಾಣೀಕರಣಕ್ಕೆ ಉತ್ತೇಜನ | ಎಲ್ಲಾ ವಲಯಗಳಿಗೆ<br>ಐಎಸ್‌ಒ, ಸರಣಿ ಪ್ರಮಾಣೀಕರಣ ವೆಚ್ಚದ 75% (ಗರಿಷ್ಠ ರೂ.75.000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಠ ರೂ.20.000/-) & 25% ವೆಚ್ಚ (ಗರಿಷ್ಠ ರೂ.50,000/-)ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ | ಎಲ್ಲಾ ವಲಯಗಳಿಗೆ<br>ಐಎಸ್‌ಒ ಸರಣಿ ಪ್ರಮಾಣೀಕರಣ ವೆಚ್ಚದ 75% (ಗರಿಷ್ಠ ರೂ.1.00.000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಠ ರೂ.25.000/-) & 25% ವೆಚ್ಚ (ಗರಿಷ್ಠ ರೂ.1.00,0000/--)ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ |
| | ಮಹಿಳಾ ಮಾಲೀಕತ್ವದ ವಾಣಿಜ್ಯ ಉದ್ಯಮ(ಡಬ್ಲ್ಯುಬಿಇ) ವೀಕನೆಕ್ಟ್ ಪ್ರಮಾಣೀಕರಣ, ಎಲ್ಲಾ ವಲಯಗಳಿಗೆ<br>3 ವರ್ಷಗಳ ಅವಧಿವರೆಗೆ ಗರಿಷ್ಠ ರೂ.75,000/-<br>ಪ್ರಮಾಣಪತ್ರ ಶುಲ್ಕದ 100% ಮೊದಲ ವರ್ಷಕ್ಕೆ –ಗರಿಷ್ಠ ರೂ.30.000/-<br>ಪ್ರಮಾಣಪತ್ರ ಶುಲ್ಕದ 90% ಎರಡನೇ ವರ್ಷಕ್ಕೆ-ಗರಿಷ್ಠ ರೂ.27.000/-<br>ಪ್ರಮಾಣಪತ್ರ ಶುಲ್ಕದ 80% ಮೂರನೇ ವರ್ಷಕ್ಕೆ ಗರಿಷ್ಠ ರೂ 18.000/- | |

| ಎಂಎಸ್‌ಎಂಇಗಳ ಸುಸ್ಥಿರತೆ ಮತ್ತು ಜವಾಬ್ದಾರಿಯುತ ಕೈಗಾರಿಕೀಕರಣ | | |
|---|---|---|
| ಯಾವ ರೀತಿಯ ಬೆಂಬಲ | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ : (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕ ಉದ್ಯಮಿಗಳು) |
| ಮಳೆ ನೀರು ಕೊಯ್ಲು | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.2 ಲಕ್ಷ ) | ಎಲ್ಲಾ ವಲಯಗಳಿಗ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.2.50 ಲಕ್ಷ ) |
| ತ್ಯಾಜ್ಯ ನೀರು ಸಂಸ್ಕರಣೆ | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.7.50 ಲಕ್ಷ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.8.50 ಲಕ್ಷ ) |
| ನೀರಿನ ಲೆಕ್ಕ ಪರಿಶೋಧನೆ(ಆಡಿಟ್)ಗೆ ತಗುಲಿದ ವೆಚ್ಚ ಮರುಪಾವತಿ | ಎಲ್ಲಾ ವಲಯಗಳಿಗೆ<br>75% ಗರಿಷ್ಠ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ (ಒಂದು ಬಾರಿಗೆ) | ಎಲ್ಲಾ ವಲಯಗಳಿಗೆ<br>75% ಗರಿಷ್ಠ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ (ಒಂದು ಬಾರಿಗೆ) |
| ಶೂನ್ಯ ತ್ಯಾಜ್ಯ/ ಹೊರಸೂಸುವಿಕೆ | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.7.50ಲಕ್ಷ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.8.50ಲಕ್ಷ) |
| ಇಲೆಕ್ಟ್ರಾನಿಕ್ ತ್ಯಾಜ್ಯ ಮತ್ತು ಪ್ಲಾಸ್ಟಿಕ್ ತ್ಯಾಜ್ಯ ಗಳ ಮರುಬಳಕೆ | ಎಲ್ಲಾ ವಲಯಗಳಿಗೆ<br>ವಿಎಫ್‌ಎಠ ಶೇ.5ರಷ್ಟು (ಗರಿಷ್ಠ ರೂ.10ಲಕ್ಷ) | ಎಲ್ಲಾ ವಲಯಗಳಿಗೆ<br>ವಿಎಫ್‌ಎಠ ಶೇ.5ರಷ್ಟು (ಗರಿಷ್ಠ ರೂ.12ಲಕ್ಷ) |
| ತ್ಯಾಜ್ಯ ಸಂಸ್ಕರಣಾ ಘಟಕ(ಇಟಿಪಿ) ಸ್ಥಾಪನೆಗೆ ಸಹಾಯಧನ | ಎಲ್ಲಾ ವಲಯಗಳಿಗೆ<br>ಇಟಿಪಿಯ ವೆಚ್ಚದ ಶೇ.50 ರಷ್ಟು (ಗರಿಷ್ಠ ರೂ.50 ಲಕ್ಷ) | ಎಲ್ಲಾ ವಲಯಗಳಿಗ<br>ಇಟಿಪಿಯ ವೆಚ್ಚದ ಶೇ.75 ರಷ್ಟು (ಗರಿಷ್ಠ ರೂ.60 ಲಕ್ಷ) |

ಹೊಸ ಕೈ

| ಎಂಎಸ್‌ಎಂಇಗಳಿಗೆ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳ ಪ್ಯಾಕೇಜ್‌ಗಳಿಗೆ ಹೆಚ್ಚುವರಿಯಾಗಿ ಖಾಸಗಿ ಕೈಗಾರಿಕಾ ಪಾರ್ಕ್‌ಗಳಲ್ಲಿ ಸ್ಥಾಪಿತವಾಗುವ ಸೂಕ್ಷ್ಮ ಮತ್ತು ಸಣ್ಣ ಘಟಕಗಳಿಗೆ ಪ್ರೋತ್ಸಾಹ | |
|---|---|
| ಭೂಮಿ ಸಬ್ಸಿಡಿ | ವಲಯ 1 ಮತ್ತು 2ಕ್ಕೆ ಮಾತ್ರ ಅನ್ವಯಿಸಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಖಾಸಗಿ ಕೈಗಾರಿಕಾ ಪ್ರದೇಶಗಳು/ ಪಾರ್ಕ್‌ಗಳು/ ವಸಾಹತುಗಳು/ ಬಹುಮಹಡಿ ಸಂಕೀರ್ಣಗಳ ಕಾರ್ಖಾನೆಗಳಿಗೆ ಆಸ್ತಿ ಮಾರ್ಗಸೂಚಿ ದರದ (ಗೈಡೆನ್ಸ್ ವ್ಯಾಲ್ಯೂ) 25% ಗರಿಷ್ಠ 1 ಎಕರೆಗೆ ಅನ್ವಯಿಸಿ ವಿಶೇಷ ಭೂ ಸಬ್ಸಿಡಿ. ಇಂತಹ ಪ್ರಕರಣಗಳಲ್ಲಿ ಸ್ಥಿರಾಸ್ತಿ ಮೌಲ್ಯ(ವಿಎಫ್‌ಎ) ಅಡಿಯಲ್ಲಿ ಭೂಮಿಯ ಮೌಲ್ಯವನ್ನು ಇನ್ನಾವುದೇ ಪ್ರೋತ್ಸಾಹಧನವನ್ನು ವಿಎಫ್‌ಗೆ ಹೊಂದಿಕೊಂಡಂತೆ ಮಂಜೂರು ಮಾಡಲು ಪರಿಗಣಿಸಬಾರದು |
| ನೀರಿನ ದರ | ಖಾಸಗಿಕೈಗಾರಿಕಾ ಪ್ರದೇಶಗಳ/ ಪಾರ್ಕ್‌ಗಳು/ ವಸಾಹತುಗಳಲ್ಲಿ.ಬಹುಮಹಡಿ ಸಂಕೀರ್ಣಗಳ ಕಾರ್ಖಾನೆಗಳಲ್ಲಿ ಸ್ಥಾಪಿಸಲಾಗಿರುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಬಳಕೆ ಮಾಡುವ ತೃತೀಯ ಹಂತದಲ್ಲಿ ಸಂಸ್ಕರಿಸಿದ ನೀರಿಗೆ ವೈಯಕ್ತಿಕವಾಗಿ ಕಾರ್ಯಾಚರಣೆ ನಡೆಸುವ ಕೈಗಾರಿಕೆಗಳಿಗೆ ಮೊದಲ 5 ವರ್ಷಗಳ ಕಾಲ ಒಂದು ಯೂನಿಟ್ ನೀರಿಗೆ (ಕೆಎಲ್‌ಡಿ) ರೂ.15/-ರಂತೆ ಸಬ್ಸಿಡಿ ನೀಡಲಾಗುವುದು. ಖಾಸಗಿ ಕೈಗಾರಿಕಾ ಪ್ರದೇಶ/ಪಾರ್ಕ್‌ಗಳು/ವಸಾಹತುಗಳು/ಬಹು ಮಹಡಿ ಸಂಕೀರ್ಣಗಳ ಕೈಗಾರಿಕೆಗಳು ಹಾಗೂ ಡೆವಲಪರ್ ಇಂತಹ ಕೈಗಾರಿಕೆಗಳಿಗೆ ಸರಬರಾಜು ಮಾಡಿದಲ್ಲಿ ಅನ್ವಯವಾಗುವುದು. |
| ಸಿಇಟಿಪಿ ದರ | ಸಾಮಾನ್ಯ ತ್ಯಾಜ್ಯ ಸಂಸ್ಕರಣಾ ಘಟಕಗಳ ನಿರಂತರ ಬಳಕೆಗೆ ಯುನಿಟ್‌ಗೆ ರೂ.15/- ಹೊರಸೂಸುವ ತ್ಯಾಜ್ಯದ ಮರುಸಂಸ್ಕರಣೆಗೆ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಕೈಗಾರಿಕೆಗಳು ಆರಂಭಗೊಂಡ ಮೊದಲ 5ವರ್ಷಗಳವರೆಗೆ ಸಬ್ಸಿಡಿ ನೀಡಲಾಗುವುದು. |

| ರಫ್ತು ಕೈಗಾರಿಕೆಗಳು | |
|---|---|
| ಯಾವ ರೀತಿಯ ಬೆಂಬಲ | ಎಲ್ಲಾ ಪ್ರವರ್ಗಗಳಿಗೆ |
| ವಿದ್ಯುತ್ ತೆರಿಗೆ ವಿನಾಯಿತಿ | ಹೊಸ ಎಂಎಸ್‌ಎಂಇ ರಫ್ತು ಉದ್ದಿಮಗ ವಲಯ 3 ರಲ್ಲಿ ಮೊದಲ 5 ವರ್ಷಗಳವರೆಗೆ 100% ವಿದ್ಯುತ್ ತೆರಿಗೆ ವಿನಾಯಿತಿ (ಒಟ್ಟು ವಹಿವಾಟಿನ ಶೇ.50ರಷ್ಟು ರಫ್ತು ಇರಬೇಕು). |
| ಕಾರ್ಯನಿರ್ವಹಣಾ ಸಬ್ಸಿಡಿ | ತಮ್ಮ ರಫ್ತನ್ನು ಮುಂದಿನ ವರ್ಷಗಳಲ್ಲಿ ದ್ವಿಗುಣಗೊಳಿಸುವ ಎಂಎಸ್‌ಎಂಇ ಕೈಗಾರಿಕೆಗಳಿಗೆ ಎಲ್ಲಾ ವಲಯಗಳಲ್ಲಿ ಎಫ್‌ಒಬಿಯ 1% ಮೌಲ್ಯವನ್ನು ಪಾವತಿಸಲಾಗುವುದು. ಗರಿಷ್ಠ ಮಿತಿ ರೂ.10. ಲಕ್ಷ/ಘಟಕವೊಂದಕ್ಕೆ. |
| ಬ್ಯಾಂಕ್ ಶುಲ್ಕ | ಎಲ್ಲಾ ವಲಯಗಳಲ್ಲಿ ಎಂಎಸ್‌ಎಂಇ ಕ್ಷೇತ್ರದ ಎಲ್ಲಾ ರಫ್ತಿನ ಇಬಿಆರ್‌ಸಿ ಪ್ರಸ್ತುತಪಡಿಸಿದಲ್ಲಿ ಬ್ಯಾಂಕ್ ಶುಲ್ಕಗಳ ಮರುಪಾವತಿ. ಗರಿಷ್ಠ ಘಟಕವೊಂದಕ್ಕೆ ರೂ.1ಲಕ್ಷ |
| ಇಸಿಜಿಸಿ ಶುಲ್ಕ | ಎಲ್ಲಾ ವಲಯಗಳಲ್ಲಿ ಎಂಎಸ್‌ಎಂಇಗಳಿಗೆ ಇಸಿಜಿಸಿ (ರಫ್ತು ಸಾಲ ಖಾತರಿ ನಿಗಮ) ಶುಲ್ಕದ ಮರುಪಾವತಿ 100% ವರೆಗೂ; ಗರಿಷ್ಠ ರೂ.1.00 ಲಕ್ಷ/ಘಟಕ/ವರ್ಷ |
| ಪ್ರಮಾಣೀಕರಣ ಶುಲ್ಕ | ಎಲ್ಲಾ ವಲಯಗಳಲ್ಲಿ ಶಾಸನಬದ್ಧ ಪ್ರಮಾಣ ಪತ್ರಗಳಾದ ಸಿಇ (ಚಾರ್ಟರ್ಡ್ ಎಂಜಿನಿಯರ್ ಸರ್ಟಿಫಿಕೇಟ್).ಚೀನಾ ಕಂಪಲ್ಸರಿ ಸರ್ಟಿಫಿಕೇಟ್((ಸಿಸಿಸಿ). ಜಿಎಂಪಿ(ಉತ್ತಮ ಉತ್ಪಾದನಾ ಅಭ್ಯಾಸ). ಫೈಟೋ ಸ್ಯಾನಿಟರಿ ಪ್ರಮಾಣಪತ್ರ, ಐಎಫ್‌ಎಸ್-ಬಿಆರ್‌ಸಿ-ಎಫ್‌ಎಸ್‌ಎಸ್22000 ಪ್ರಮಾಣಪತ್ರಗಳ ಮೇಲಿನ ವೆಚ್ಚದ 50% ಗರಿಷ್ಠ 1.00 ಲಕ್ಷ/ಒಂದು ಘಟಕಕ್ಕೆ ಮರುಪಾವತಿ. |
| ಪ್ರಮಾಣ ಪತ್ರ ಪಡೆಯಲು ಶುಲ್ಕ | ಎಲ್ಲ ವಲಯಗಳಲ್ಲಿ ಸರ್ಕಾರ ಅಥವಾ ಇನ್ನಾವುದೇ ಮಾನ್ಯತೆ ಪಡೆದ ಸಂಸ್ಥೆ ನಡೆಸುವ ಆಮದು-ರಫ್ತು ನಿರ್ವಹಣೆ ಕೋರ್ಸ್‌ಗೆ ಪಾವತಿಸಿದ ಶುಲ್ಕ ಮರುಪಾವತಿ ಕನಿಷ್ಠ 4 ತಿಂಗಳ ಅವಧಿ ಕೋರ್ಸ್‌ಗೆ 50% ಶುಲ್ಕ, ಗರಿಷ್ಠ ರೂ.25.000/ಅಭ್ಯರ್ಥಿ/ಕೋರ್ಸ್‌ಗೆ.<br><br>ಉತ್ತೇಜನವು ನೀತಿ ಅವಧಿಯಲ್ಲಿ ಒಂದು ಕೋರ್ಸ್‌ಗೆ ಒಂದು ಬಾರಿಗೆ ಲಭ್ಯವಿದ್ದು ಒಂದು ಘಟಕಕ್ಕೆ ಗರಿಷ್ಠ 1.00 ಲಕ್ಷ ರೂ ನೀಡಲಾಗುವುದು. |

## ಉತ್ತೇಜನ ಮತ್ತು ರಿಯಾಯಿತಿಗಳ ಪ್ಯಾಕೇಜ್‌ಗೆ ಅರ್ಹವಾದ ಸೇವಾ ಉದ್ದಿಮೆಗಳ ಪಟ್ಟಿ

ಜಿಲ್ಲಾ ಮಟ್ಟದ ಏಕಗವಾಕ್ಷಿ ಪರವಾನಗಿ ಸಮಿತಿ (ಡಿಎಲ್‌ಎಸ್‌ಡಬ್ಲುಸಿಸಿ) ರಾಜ್ಯ ಮಟ್ಟದ ಏಕ ಗವಾಕ್ಷಿ ಪರವಾನಗಿ ಸಮಿತಿ (ಎಸ್‌ಎಲ್‌ಎಸ್‌ಡಬ್ಲುಸಿಸಿ) ಮತ್ತು ರಾಜ್ಯ ಉನ್ನತ ಮಟ್ಟದ ಪರವಾನಗಿ ಸಮಿತಿ (ಎಸ್‌ಹೆಚ್‌ಎಲ್‌ಸಿಸಿ) (ಸೂಕ್ಷ್ಮ ಕೈಗಾರಿಕೆಗಳನ್ನು ಹೊರತುಪಡಿಸಿ)ಯಿಂದ ಅನುಮೋದಿತ ಯೋಜನೆಗಳಿಗೆ ಮಾತ್ರ ಅನ್ವಯ.

1. ಜಾಬ್‌ವರ್ಕ್‌ನಲ್ಲಿ ತೊಡಗಿರುವ ಪೌಡರ್‌ಕೋಟಿಂಗ್/ಕ್ರೋಮ್ ಪ್ಲೇಟಿಂಗ್/ಕೈಗಾರಿಕಾ ಇಲೆಕ್ಟ್ರೋ ಪ್ಲೆಟಿಂಗ್/ ಪೈಂಟಿಂಗ್ ಎಂಟರ್‌ಪ್ರೈಸಸ್/ ಕೈಗಾರಿಕಾ ಪೈಂಟಿಂಗ್‌ಗಳು
2. ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ ಕೈಗಾರಿಕಾ ಪ್ರದೇಶ ವಸಾಹತು ಆವರಣದೊಳಗೆ ಸ್ಥಾಪಿಸಿದ ತೂಕದಯಂತ್ರ (ವೇಬ್ರಿಜ್ಡ್)
3. ಉಪಕರಣ/ಉತ್ಪನ್ನ ಪರೀಕ್ಷಾಲಯ
4. ಆಫ್‌ಸೆಟ್ ಮುದ್ರಣ, ಡಿಜಿಟಲ್ ಮುದ್ರಣ (ಡಿಜಿಟಲ್ ಫೋಟೋ ಪ್ರಾಂಟಿಂಗ್, ಫ್ಲೆಕ್ಸ್ ಪ್ರಾಂಟಿಂಗ್ ಹೊರತಾಗಿ)
5. ಕಾಮನ್ ತ್ಯಾಜ್ಯ/ ಸಂಸ್ಕರಣಾ ಘಟಕ
6. ಕೈಗಾರಿಕೆಗಳ ಅಪಾಯಕಾರಿ ತ್ಯಾಜ್ಯ ನಿರ್ವಹಣಾ ವ್ಯವಸ್ಥೆ
7. ಜನರಲ್ ಎಂಜಿನಿಯರಿಂಗ್, ಫ್ಯಾಬ್ರಿಕೇಶನ್
8. ಹಿಟ್ಟಿನಗಿರಣಿ
9. ಕೈಗಾರಿಕೆಗಳಿಗೆ ಬೆಂಬಲವಾಗಿ ನಿಲ್ಲುವ ಲಾಜಿಸ್ಟಿಕ್ಸ್ ಸೌಲಭ್ಯಗಳು
   - ಡ್ರೈ ಬಂದರುಗಳು (ಐಸಿಡಿ/ಸಿಎಫ್‌ಎಸ್/ಎಎಫ್‌ಎಸ್)
   - ಕೈಗಾರಿಕಾ ಪ್ರದೇಶದ ವಸಾಹತುವಿನಲ್ಲಿ ಕೈಗಾರಿಕಾಉಗ್ರಾಣ (>50 ಸಾವಿರ ಚದರಡಿ ಸಂಗ್ರಹಣಾ ಸ್ಥಳ) ಉಪಕರಣ ನಿರ್ವಹಣಾ ಸಲಕರಣೆ (ಸರಕು ಸಾಗಣಿಕಾ ವಾಹನ ಮತ್ತು ಸರಕು ವಾಹನಗಳನ್ನು ಹೊರತಾಗಿ)
   - ಶೀತಲೀಕರಣಗಳು (>20 ಸಾವಿರ ಚದರಡಿ ಸಂಗ್ರಹಣಾ ಸ್ಥಳ) ಅಗ್ರೀ ಮತ್ತು ಆಹಾರ ಸಂಸ್ಕರಣಾ ಕಾರ್ಖಾನೆಗಳ ಹೊರತಾಗಿ
   - ಮುಕ್ತ ವ್ಯಾಪಾರ ಉಗ್ರಾಣ ವಲಯಗಳು (ಎಫ್.ಟಿ.ಡಬ್ಲು.ಝಡ್)

**ರಾಜ್ಯ ಮಟ್ಟದ ಸಮನ್ವಯ ಸಮಿತಿಗೆ ಅನುಬಂಧದಲ್ಲಿ ಸೇರ್ಪಡೆಗೊಳಿಸಲಾದ ಸೇವೆಗಳ ಸೇರ್ಪಡೆ/ ತೆಗೆದು ಹಾಕುವ ಅಧಿಕಾರ ನೀಡಲಾಗಿದೆ.**

## ಉತ್ತೇಜನ ಮತ್ತು ರಿಯಾಯಿತಿಗಳಿಗೆ ಅರ್ಹವಲ್ಲದ ಕೈಗಾರಿಕಾ ಚಟುವಟಿಕೆಗಳು/ಕೈಗಾರಿಕೆಗಳು

1. ಸಕ್ಕರೆ ಕಾರ್ಖಾನೆಯ ಭಾಗವಾದ ಎಲ್ಲಾ ರೀತಿಯ ಮದ್ಯ ಮತ್ತು ಡಿಸ್ಟಿಲ್ಲರಿಗಳು, ವೈನರಿ ಮತ್ತು ಎಥಿನಾಲ್ ಘಟಕಗಳ ಹೊರತಾಗಿ
2. ಖಂಡ್ಸಾರಿ ಮತ್ತು ಬೆಲ್ಲ ತಯಾರಿಕಾ ಉದ್ಯಮ.
3. ಫೋಟೋ ಸ್ಟುಡಿಯೋಗಳು, ಕಲರ್ ಪ್ರೊಸೆಸಿಂಗ್ ಹಾಗೂ ತಕ್ಷಣ ಫೋಟೊ ಪ್ರಿಂಟಿಂಗ್ ಉದ್ಯಮಗಳು.
4. ಫೋಟೊಕಾಪಿ, ಜೆರಾಕ್ಸ್ ಯಂತ್ರಗಳು/ಫ್ಯಾಕ್ಸ್ ಯಂತ್ರಗಳು/ ಡೇಟಾಎಂಟ್ರಿ (ಅಂಕಿ ಅಂಶ ದಾಖಲಾತಿ) ಡೆಟಾ ರಿಕವರಿ ಉದ್ದಿಮೆಗಳು.
5. ಗೊಬ್ಬರ ಮಿಶ್ರಣ ಘಟಕಗಳು.
6. ಪಾರ್ಟಿಕಲ್ ಬೋರ್ಡ್ / ಕಡಿಮೆ ಸಾಂದ್ರತೆಯ ಫೈಬರ್ ಬೋರ್ಡ್ (ಎಲ್‌ಡಿಎಫ್), ಮಧ್ಯಮ ಸಾಂದ್ರತೆಯ ಫೈಬರ್ ಬೋರ್ಡ್ (ಎಂಡಿಎಫ್), ಹೆಚ್ಚು ಸಾಂದ್ರತೆಯ ಫೈಬರ್ ಬೋರ್ಡ್ (ಎಚ್‌ಡಿಎಫ್) ಹೊರತುಪಡಿಸಿ ಎಲ್ಲಾ ರೀತಿಯ ಸಾಮಿಲ್‌ಗಳು
7. ಬೀಡಿ/ ಸಿಗರೇಟು/ ಸಿಗಾರು/ ಗುಟ್ಕಾ ಮತ್ತು ತಂಬಾಕು ಆಧಾರಿತ ಉತ್ಪನ್ನ ಉತ್ಪಾದಿತ ಉದ್ದಿಮೆಗಳು.
8. ಅರ್ಝೋಯಿಕ್/ರಿಯಾಕ್ಟಿನ್ ಡೈಸ್‌ಗಳು ಉತ್ಪಾದನಾ ಉದ್ಯಮಿ.
9. ಪಟಾಕಿ ಉತ್ಪಾದನಾ ಉದ್ಯಮ.
10. ಓಜೋನ್ ಪದರಕ್ಕೆ ಹಾನಿ ಮಾಡುವ/ ಕರಗಿಸುವ ಉತ್ಪಾದಕ ಕೈಗಾರಿಕೆಗಳು.
11. ವಿದ್ಯುತ್‌ಚಾಲಿತ ದೋಬಿ ಖಾನೆಗಳು ಸೇರಿದಂತೆ ದೋಬಿಖಾನೆಗಳು.
12. ಸಿಮೆಂಟ್ ಹಾಲೋ/ ಸಾಲಿಡ್ ಬ್ಲಾಕ್ಸ್, ವೈರ್‌ಕಟ್, ಹಾರುಬೂದಿ ಇಟ್ಟಿಗೆ ಮತ್ತು ರಿಫ್ಯಾಕ್ಟರಿ ಇಟ್ಟಿಗೆ ಉತ್ಪಾದನಾ ಉದ್ದಿಮೆಗಳನ್ನು ಹೊರತುಪಡಿಸಿ ಇಟ್ಟಿಗೆ ತಯಾರಿಸುವ ಘಟಕಗಳು
13. ಕುಕ್ಕುಟ ಉದ್ಯಮ (ಹ್ಯಾಚರಿ ಸೇರಿದಂತೆ).
14. ಪಾಪ್‌ಕಾರ್ನ್ ಮತ್ತು ಐಸ್‌ಕ್ಯಾಂಡಿ ಉತ್ಪಾದನಾ ಉದ್ಯಮ (ಐಸ್‌ಕ್ರೀಂ ಹೊರತುಪಡಿಸಿ).
15. 2 ಮೆಟ್ರಿಕ್‌ಟನ್‌ಗಿಂತ ಕಡಿಮೆ ಸಾಮರ್ಥ್ಯದ ಕಾಫಿ ರೋಸ್ಟಿಂಗ್ ಗ್ರೈಂಡಿಂಗ್ ಘಟಕ.
16. ಗಡಿಯಾರ/ ಮೊಬೈಲ್/ ಕಂಪ್ಯೂಟರ್ ಯಂತ್ರಾಂಶ ರಿಪೇರಿ ಉದ್ಯಮ.
17. ಕ್ಯಾಸೆಟದ ರೆಕಾರ್ಡಿಂಗ್ (ಧ್ವನಿ/ದೃಶ್ಯ ಮುದ್ರಣ) ಉದ್ಯಮಗಳು.
18. ಸೈನೈಡ್ ಉತ್ಪಾದನಾ ಉದ್ಯಮಗಳು.
19. ಗಣಿಗಾರಿಕೆ ಮತ್ತು ಗಣಿಗಾರಿಕೆ ಉಪಕರಣಗಳು.
20. ಸುಣ್ಣದಕಲ್ಲು ಮತ್ತು ಸುಟ್ಟ ಸುಣ್ಣದ ಘಟಕಗಳು.
21. ಎಕ್ಸರೇ ಕ್ಲಿನಿಕ್‌ಗಳು ಮತ್ತು ಕ್ಲಿನಿಕಲ್/ ಪೆಥಾಲಜಿಕಲ್ (ರೋಗಪತ್ತೆ) ಪ್ರಯೋಗಾಲಯಗಳು, ಸ್ಕ್ಯಾನಿಂಗ್, ಎಂಆರ್‌ಐ ಪರೀಕ್ಷಾ ಉದ್ಯಮಗಳು.
22. ರಿಗ್, ಕಾಂಕ್ರಿಟ್‌ಗಳು/ ಡಾಂಬರು ಮಿಶ್ರಣ ಘಟಕಗಳು/ ನಿವೇಶನ ಆಧಾರಿತ ಘಟಕಗಳು ಸೇರಿದಂತೆ ಹಾಟ್–ಮಿಕ್ಸ್ ಘಟಕಗಳು/ ಕೈಗಾರಿಕೆಗಳು.
23. ಕ್ರಿಸೋಲೈಟ್‌ಆಸ್ಬೆಸ್ಟರ್ (ವೈಟ್‌ಕ್ರಸ್ಟಲ್) ಉತ್ಪಾದನಾ ಘಟಕಗಳು.
24. ಎಲ್ಲಾರೀತಿಯ ಸಲೂನ್/ ಸ್ಪಾ/ ಮಸಾಜ್ ಕೇಂದ್ರಗಳು ಇನ್ನಿತರ.
25. ಎಲ್ಲಾರೀತಿಯ ಹೋಟೆಲ್‌ಗಳು/ ರೆಸ್ಟೊರೆಂಟ್‌ಗಳು/ ವಿಹಾರಧಾಮಗಳು (ರೆಸಾರ್ಟ್), ಮನರಂಜನಾ ಪಾರ್ಕ್‌ಗಳು ಇತ್ಯಾದಿ.
26. ಎರೆಹುಳು ಗೊಬ್ಬರ.
27. ಮೇಲ್ಛಾವಣೆ ಮೇಲಿನ ಸೌರ ವಿದ್ಯುತ್‌ಉತ್ಪಾದನೆ.
28. ಎಲ್‌ಪಿಜಿ ಮತ್ತಿತರ ಬಾಟ್ಲಿಂಗ್.
29. ಜೈವಿಕ ಇಂಧನ ಉತ್ಪಾದನಾ ಘಟಕಗಳಿಗೆ ಸಂಬಂಧಿತ/ ಬೆಂಬಲಿತ ಸಮೂಹಗಳು/ ಸರಬರಾಜು ಶಂಖಲೆಯ ವ್ಯಾಪಾರ ಉದ್ದಿಮೆಗಳು

ಪರಿಸರಕ್ಕೆ ನೀಡುವ ಕೊಡುಗೆ ಪರಿಗಣಿಸಿ ಇಟಿಪಿಗಳ ಸ್ಥಾಪನೆಗೆ ಮಾಡಿದ ಹೊಸ ಹೂಡಿಕೆಗಳ ಮೇಲೆ ಅರ್ಹ ಸಹಾಯಧನ ನೀಡಲಾಗುವುದು.

## ವಲಯ ವರ್ಗೀಕರಣ

ರಾಜ್ಯದಲ್ಲಿ ಸಧೃಡವಾದ ಕೈಗಾರಿಕಾ ಅಡಿಪಾಯವನ್ನು ಹಾಕಲು ಮತ್ತು ರಾಜ್ಯದ ಸಮಗ್ರ ಅಭಿವೃದ್ಧಿಗೆ, ಕೈಗಾರಿಕಾ ಅಭಿವೃದ್ಧಿಯಲ್ಲಿ ಹಿಂದುಳಿದಿರುವುದನ್ನು ಆಧರಿಸಿ, ತಾಲೂಕುಗಳನ್ನು ಗುಂಪುಗಳಾಗಿ ಮಾಡಲಾಗಿದೆ ಮತ್ತು ಪ್ರತ್ಯೇಕ ಪ್ರೋತ್ಸಾಹ/ ರಿಯಾಯಿತಿ ವಲಯಗಳನ್ನಾಗಿ ವಿಂಗಡಿಸಲಾಗಿದೆ. ತಾಲೂಕುಗಳ ವರ್ಗೀಕರಣ ಈ ಕೆಳಗಿನಂತಿದೆ.

| ಸಂ | ಜಿಲ್ಲೆಗಳು | ಒಟ್ಟು ತಾಲೂಕುಗಳು | ವಲಯ 1 | ವಲಯ 2 | ವಲಯ 3 |
|---|---|---|---|---|---|
| 1 | ಬೆಂಗಳೂರು (ನ) | 5 | | | ಆನೇಕಲ್ |
| | | | | | ಬೆಂಗಳೂರು (ಉತ್ತರ) |
| | | | | | ಬೆಂಗಳೂರು (ದಕ್ಷಿಣ) |
| | | | | | ಯಲಹಂಕ |
| | | | | | ಬೆಂಗಳೂರು (ಪೂ) |
| 2 | ಬೆಂಗಳೂರು (ಗ್ರಾ) | 4 | | | ದೇವನಹಳ್ಳಿ |
| | | | | | ದೊಡ್ಡಬಳ್ಳಾಪುರ |
| | | | | | ಹೊಸಕೋಟೆ |
| | | | | | ನೆಲಮಂಗಲ |
| 3 | ರಾಮನಗರ | 5 | | ಮಾಗಡಿ | |
| | | | | ರಾಮನಗರ | |
| | | | | ಚನ್ನಪಟ್ಟಣ | |
| | | | | ಕನಕಪುರ | |
| | | | | ಹಾರೋಹಳ್ಳಿ | |
| 4 | ಚಿತ್ರದುರ್ಗ | 6 | ಹೊಳಲ್ಕೆರೆ | ಹಿರಿಯೂರು | |
| | | | | ಚಿತ್ರದುರ್ಗ | |
| | | | | ಚಳ್ಳಕೆರೆ | |
| | | | | ಹೊಸದುರ್ಗ | |
| | | | | ಮೊಳಕಾಲ್ಮೂರು | |
| 5 | ದಾವಣಗೆರೆ | 6 | ಚನ್ನಗಿರಿ | ದಾವಣಗೆರೆ | |
| | | | ಜಗಳೂರು | ಹರಿಹರ | |
| | | | ಹೊನ್ನಾಳಿ | ನ್ಯಾಮತಿ | |
| 6 | ಚಿಕ್ಕಬಳ್ಳಾಪುರ | 7 | ಗುಡಿಬಂಡೆ | ಚಿಂತಾಮಣಿ | |
| | | | ಬಾಗೆಪಲ್ಲಿ | ಗೌರಿಬಿದನೂರು | |
| | | | ಚಿಕ್ಕಬಳ್ಳಾಪುರ | ಶಿಡ್ಲಗಟ್ಟ | |
| | | | | ಚೇಳೂರು | |
| 7 | ಕೋಲಾರ | 6 | ಶ್ರೀನಿವಾಸಪುರ | ಬಂಗಾರಪೇಟೆ | |
| | | | | ಕೆಜಿಎಫ್ | |
| | | | | ಕೋಲಾರ | |
| | | | | ಮಾಲೂರು | |
| | | | | ಮುಳಬಾಗಿಲು | |
| 8 | ಶಿವಮೊಗ್ಗ | 7 | ಸೊರಬ | ಸಾಗರ | |
| | | | ಹೊಸನಗರ | ತೀರ್ಥಹಳ್ಳಿ | |
| | | | ಶಿಕಾರಿಪುರ | ಶಿವಮೊಗ್ಗ | |
| | | | | ಭದ್ರಾವತಿ | |
| 9 | ತುಮಕೂರು | 10 | ಮಧುಗಿರಿ | ತುರುವೇಕೆರೆ | |
| | | | ಕೊರಟಗೆರೆ | ಶಿರಾ | |
| | | | ಗುಬ್ಬಿ | ತಿಪಟೂರು | |
| | | | ಪಾವಗಡ | ಕುಣಿಗಲ್ | |
| | | | ಚಿಕ್ಕನಾಯಕನಹಳ್ಳಿ | ತುಮಕೂರು | |
| 10 | ಚಾಮರಾಜನಗರ | 5 | ಯಳಂದೂರು | | |

| ಸಂ | ಜಿಲ್ಲೆಗಳು | ಒಟ್ಟು ತಾಲ್ಲೂಕುಗಳು | ವಲಯ 1 | ವಲಯ 2 | ವಲಯ 3 |
|---|---|---|---|---|---|
| | | | ಗುಂಡ್ಲುಪೇಟೆ | | |
| | | | ಹನೂರು | | |
| | | | ಚಾಮರಾಜನಗರ | | |
| | | | ಕೊಳ್ಳೇಗಾಲ | | |
| 11 | ಚಿಕ್ಕಮಗಳೂರು | 9 | | ಕಡೂರು | |
| | | | | ಮೂಡಿಗೆರೆ | |
| | | | | ತರೀಕೆರೆ | |
| | | | | ಚಿಕ್ಕಮಗಳೂರು | |
| | | | | ಅಜ್ಜಂಪುರ | |
| | | | | ಶೃಂಗೇರಿ | |
| | | | | ಕೊಪ್ಪ | |
| | | | | ಎನ್.ಆರ್.ಪುರ | |
| | | | | ಕಳಸ | |
| 12 | ದಕ್ಷಿಣಕನ್ನಡ | 9 | | ಬಂಟ್ವಾಳ | |
| | | | | ಸುಳ್ಯ | |
| | | | | ಬೆಳ್ತಂಗಡಿ | |
| | | | | ಪುತ್ತೂರು | |
| | | | | ಮುಲ್ಕಿ | |
| | | | | ಉಳ್ಳಾಲ | |
| | | | | ಮೂಡಬಿದಿರೆ | |
| | | | | ಕಡಬ | |
| | | | | ಮಂಗಳೂರು | |
| 13 | ಹಾಸನ | 9 | ಅರಕಲಗೂಡು | ಆಲೂರು | |
| | | | ಬೇಲೂರು | ಚನ್ನರಾಯಪಟ್ಟಣ | |
| | | | ಅರಸೀಕೆರೆ | ಶಾಂತಿಗ್ರಾಮ | |
| | | | | ಹಾಸನ | |
| | | | | ಹೆಚ್.ಎನ್.ಪುರ | |
| | | | | ಸಕಲೇಶಪುರ | |
| 14 | ಕೊಡಗು | 5 | ಮಡಿಕೇರಿ | | |
| | | | ಸೋಮವಾರಪೇಟೆ | | |
| | | | ವಿರಾಜಪೇಟೆ | | |
| | | | ಪೊನ್ನಂಪೇಟೆ | | |
| | | | ಕುಶಾಲನಗರ | | |
| 15 | ಮಂಡ್ಯ | 7 | | ಶ್ರೀರಂಗಪಟ್ಟಣ | |
| | | | | ಪಾಂಡವಪುರ | |
| | | | | ಮಂಡ್ಯ | |
| | | | | ಮದ್ದೂರು | |
| | | | | ನಾಗಮಂಗಲ | |
| | | | | ಮಳವಳ್ಳಿ | |
| | | | | ಕೆ.ಆರ್.ಪೇಟೆ | |
| 16 | ಮೈಸೂರು | 9 | | ಹುಣಸೂರು | |
| | | | | ಕೆ.ಆರ್.ನಗರ | |
| | | | | ಮೈಸೂರು | |
| | | | | ನಂಜನಗೂಡು | |
| | | | | ಟಿ.ನರಸೀಪುರ | |

| ಕ್ರಂ | ಜಿಲ್ಲೆಗಳು | ಒಟ್ಟು ತಾಲ್ಲೂಕುಗಳು | ವಲಯ 1 | ವಲಯ 2 | ವಲಯ 3 |
|---|---|---|---|---|---|
| | ಮೈಸೂರು | | | ಪಿರಿಯಾಪಟ್ಟಣ | |
| | | | | ಹೆಚ್.ಡಿ.ಕೋಟೆ | |
| | | | | ಸರಗೂರು | |
| | | | | ಸಾಲಿಗ್ರಾಮ | |
| 17 | ಉಡುಪಿ | 7 | | ಕಾರ್ಕಳ | |
| | | | | ಬ್ರಹ್ಮಾವರ | |
| | | | | ಉಡುಪಿ | |
| | | | | ಕುಂದಾಪುರ | |
| | | | | ಕಾಪು | |
| | | | | ಹೆಬ್ರಿ | |
| | | | | ಬೈಂದೂರು | |
| 18 | ಬಾಗಲಕೋಟೆ | 10 | ಬೀಳಗಿ | | |
| | | | ಬಾದಾಮಿ | | |
| | | | ಮುಧೋಳ | | |
| | | | ಜಮಖಂಡಿ | | |
| | | | ಹುನಗುಂದ | | |
| | | | ಗುಳೇದಗುಡ್ಡ | | |
| | | | ರಬಕವಿ-ಬನಹಟ್ಟಿ | | |
| | | | ತೇರದಾಳ | | |
| | | | ಇಳಕಲ್ | | |
| | | | ಬಾಗಲಕೋಟೆ | | |
| 19 | ಬೆಳಗಾವಿ | 15 | ಬೈಲಹೊಂಗಲ | | |
| | | | ಸೌಂದತ್ತಿ | | |
| | | | ಚಿಕ್ಕೋಡಿ | | |
| | | | ರಾಯಭಾಗ | | |
| | | | ಖಾನಾಪುರ | | |
| | | | ರಾಮದುರ್ಗ | | |
| | | | ಹುಕ್ಕೇರಿ | | |
| | | | ಅಥಣಿ | | |
| | | | ಗೋಕಾಕ್ | | |
| | | | ನಿಪ್ಪಾಣಿ | | |
| | | | ಕಾಗವಾಡ | | |
| | | | ಮೂಡಲಗಿ | | |
| | | | ಯರಗಟ್ಟಿ | | |
| | | | ಕಿತ್ತೂರು | | |
| | | | ಬೆಳಗಾವಿ | | |
| 20 | ವಿಜಯಪುರ | 13 | ಸಿಂಧಗಿ | | |
| | | | ಇಂಡಿ | | |
| | | | ಮುದ್ದೇಬಿಹಾಳ | | |
| | | | ಬಿ.ಬಾಗೇವಾಡಿ | | |
| | | | ಅಲಮೇಲ | | |
| | | | ಬಬಲೇಶ್ವರ | | |
| | | | ನಿಡಗುಂದಿ | | |
| | | | ಟಿಕೋಟ | | |
| | | | ಚಡಚಣ | | |

| ಸಂ | ಜಿಲ್ಲೆಗಳು | ಒಟ್ಟು ತಾಲೂಕುಗಳು | ವಲಯ 1 | ವಲಯ 2 | ವಲಯ 3 |
|---|---|---|---|---|---|
| | | | ಕೋಲ್ಹಾರ | | |
| | | | ದೇವರಹಿಪ್ಪರಗಿ | | |
| | | | ತಾಳೀಕೋಟೆ | | |
| | ವಿಜಯಪುರ | | ವಿಜಯಪುರ | | |
| | | | ನವಲಗುಂದ | | |
| | | | ಕಲಘಟಗಿ | | |
| | | | ಕುಂದಗೋಳ | | |
| | | | ಅಣ್ಣೀಗೇರಿ | | |
| 21 | ಧಾರವಾಡ | 8 | ಅಳ್ನಾವರ | | |
| | | | ಹುಬ್ಬಳ್ಳಿ (ಗ್ರಾ) | | |
| | | | ಧಾರವಾಡ | | |
| | | | ಹುಬ್ಬಳ್ಳಿ (ನ) | | |
| | | | ಮುಂಡರಗಿ | | |
| | | | ನರಗುಂದ | | |
| | | | ರೋಣ | | |
| 22 | ಗದಗ | 7 | ಶಿರಹಟ್ಟಿ | | |
| | | | ಗಜೇಂದ್ರಘಡ | | |
| | | | ಲಕ್ಷ್ಮೇಶ್ವರ | | |
| | | | ಗದಗ | | |
| | | | ಸವಣೂರು | | |
| | | | ಶಿಗ್ಗಾಂವಿ | | |
| | | | ಹಿರೇಕೆರೂರು | | |
| 23 | ಹಾವೇರಿ | 8 | ಹಾನಗಲ್ | | |
| | | | ರಾಣಿಬೆನ್ನೂರು | | |
| | | | ಬ್ಯಾಡಗಿ | | |
| | | | ರಟ್ಟಿಹಳ್ಳಿ | | |
| | | | ಹಾವೇರಿ | | |
| | | | ಹೊನ್ನಾವರ | | |
| | | | ಶಿರಸಿ | | |
| | | | ಮುಂಡಗೋಡ | | |
| | | | ಯಲ್ಲಾಪುರ | | |
| | | | ಸಿದ್ದಾಪುರ | | |
| 24 | ಉತ್ತರಕನ್ನಡ | 12 | ಹಳಿಯಾಳ | | |
| | | | ಜೋಯಿಡಾ | | |
| | | | ಭಟ್ಕಳ | | |
| | | | ಅಂಕೋಲಾ | | |
| | | | ಕುಮಟಾ | | |
| | | | ದಾಂಡೇಲಿ | | |
| | | | ಕಾರವಾರ | | |
| | | | ಹೆಚ್.ಬಿ.ಹಳ್ಳಿ | | |
| | | | ಹಡಗಲಿ | | |
| 25 | ಬಳ್ಳಾರಿ | 11 | ಕೂಡ್ಲಿಗಿ | | |
| | | | ಹೊಸಪೇಟೆ | | |
| | | | ಸಂಡೂರು | | |
| | | | ಶಿರಗುಪ್ಪ | | |

| ಸಂ | ಜಿಲ್ಲೆಗಳು | ಒಟ್ಟು ತಾಲೂಕುಗಳು | ವಲಯ 1 | ವಲಯ 2 | ವಲಯ 3 |
|---|---|---|---|---|---|
| | ಬಳ್ಳಾರಿ | | ಹರಪನಹಳ್ಳಿ | | |
| | | | ಕುರುಗೋಡು | | |
| | | | ಕೊಟ್ಟೂರು | | |
| | | | ಕಂಪ್ಲಿ | | |
| | | | ಬಳ್ಳಾರಿ | | |
| 26 | ಬೀದರ್ | 8 | ಬಾಲ್ಕಿ | | |
| | | | ಹಮ್ನಾಬಾದ್ | | |
| | | | ಬಸವಕಲ್ಯಾಣ | | |
| | | | ಔರಾದ್ | | |
| | | | ಚಿಟಗುಪ್ಪ | | |
| | | | ಹುಲುಸೂರು | | |
| | | | ಕಮಲಾನಗರ | | |
| | | | ಬೀದರ್ | | |
| 27 | ಕಲಬುರ್ಗಿ | 11 | ಅಫ್ಜಲ್‌ಪುರ | | |
| | | | ಅಳಂದಾ | | |
| | | | ಜೇವರ್ಗಿ | | |
| | | | ಸೇಡಂ | | |
| | | | ಚಿತ್ತಾಪುರ | | |
| | | | ಚಿಂಚೋಳಿ | | |
| | | | ಕಲಗಿ | | |
| | | | ಕಮ್ಲಾಪುರ | | |
| | | | ಯೆಡ್ರಾಮಿ | | |
| | | | ಶಹಾಬಾದ್ | | |
| | | | ಕಲಬುರ್ಗಿ | | |
| 28 | ಯಾದಗಿರಿ | 6 | ಯಾದಗಿರಿ | | |
| | | | ಷಹಾಪುರ್ | | |
| | | | ಶೋರಾಪುರ್ | | |
| | | | ಹುಣಸಗಿ | | |
| | | | ವಡಗೇರ | | |
| | | | ಗುರುಮಿಟಕಲ್ | | |
| 29 | ಕೊಪ್ಪಳ | 7 | ಕುಷ್ಠಗಿ | | |
| | | | ಯಲಬುರ್ಗ | | |
| | | | ಗಂಗಾವತಿ | | |
| | | | ಕುಕ್ಕನೂರು | | |
| | | | ಕರಟಗಿ | | |
| | | | ಕನಕಗಿರಿ | | |
| | | | ಕೊಪ್ಪಳ | | |
| 30 | ರಾಯಚೂರು | 7 | ಸಿಂಧನೂರು | | |
| | | | ಮಾನ್ವಿ | | |
| | | | ಲಿಂಗಸಗೂರು | | |
| | | | ದೇವದುರ್ಗ | | |
| | | | ಮಸ್ಕಿ | | |
| | | | ಸಿರವಾರ | | |
| | | | ರಾಯಚೂರು | | |
| | ಒಟ್ಟು | 239 | 152 | 78 | 9 |